# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಶುಕ್ರವಾರ, ಜುಲೈ 08, 2022

ಸಂಪುಟ : 49 ಸಂಚಿಕೆ : 55 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




# ಭಾರೀ ಮಳೆ: ತುಂಗಭದ್ರಾ ನದಿಗೆ 60 ಸಾವಿರ ಕ್ಯೂಸೆಕ್ಸ್ ನೀರು

ಮಲೇಬೆನ್ನೂರು, ಜು.7- ಮಲೆನಾಡಿನಲ್ಲಿ ಮಳೆ ಪ್ರಮಾಣ ಹೆಚ್ಚಾಗಿದ್ದು, ತುಂಗಾ, ಭದ್ರಾ ನದಿಗಳಿಗೆ ಒಳಹರಿವು ಮತ್ತಷ್ಟು ಹೆಚ್ಚಳವಾಗಿದೆ.

ಆಗುಂಬೆ, ಶೃಂಗೇರಿ, ತೀರ್ಥಹಳ್ಳಿ ಭಾಗಗಳಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ತುಂಗಾ ಜಲಾಶಯಕ್ಕೆ ಗುರುವಾರ ಬೆಳಿಗ್ಗೆ 52 ಸಾವಿರ ಕ್ಯೂಸೆಕ್ಸ್‌ಗೆ ಇದ್ದ ಒಳಹರಿವು ಸಂಜೆ ವೇಳೆಗೆ 60 ಸಾವಿರ ಕ್ಯೂಸೆಕ್ಸ್ ತಲುಪಿದೆ.

### ಉಕ್ಕಡಗಾತ್ರಿ-ಫತ್ತೇಪುರ ರಸ್ತೆ ಸಂಪರ್ಕ ಬಂದ್

ಒಳಬರುವ ಎಲ್ಲಾ ನೀರನ್ನು ತುಂಗಾ ನದಿಗೆ ಬಿಟ್ಟಿರುವುದರಿಂದ ತುಂಗಭದ್ರಾ ನದಿಯಲ್ಲಿ ನೀರಿನ ಮಟ್ಟ ದಿಢೀರ್ ಏರಿಕೆ ಆಗಿದ್ದು, ಉಕ್ಕಡಗಾತ್ರಿ ಗ್ರಾಮದಲ್ಲಿ ಶ್ರೀಗುರು ಕರಿಬಸವೇಶ್ವರ ಅಜ್ಜಯ್ಯನ ದೇವಸ್ಥಾನದ ಕೆಳಗಡೆ ನದಿ ಸಮೀಪ ಇದ್ದ ಅಂಗಡಿಗಳು ನೀರಿನಲ್ಲಿ ಮುಳುಗಿವೆ.

ಅಲ್ಲದೆ ಉಕ್ಕಡಗಾತ್ರಿ-ಪತ್ತೇಪುರ ಸಂಪರ್ಕ ಸೇತುವೆಯೂ ನದಿ ಹಿನ್ನೀರಿನಲ್ಲಿ ಮುಳುಗಿದ್ದು, ರಸ್ತೆ ಸಂಪರ್ಕ ಬಂದ್ ಆಗಿದೆ.

ಉಕ್ಕಡಗಾತ್ರಿಗೆ ತೆರಳುವವರು ತುಮ್ಮಿನಕಟ್ಟೆ-ಮಾಳನಾಯಕನಹಳ್ಳಿ ಮಾರ್ಗವಾಗಿ ಅಥವಾ ನಿಟ್ಟೂಪಳ್ಳಿ-ಕೋಟೆಹಾಳ್ ಮಾರ್ಗವಾಗಿ ಹೋಗಬಹುದು.

ತುಂಗಭದ್ರಾ ನದಿ ಪಾತ್ರದ ತೋಟ-ಗದ್ದೆಗಳು ಹಿನ್ನೀರಿನಲ್ಲಿ ಮುಳುಗಡೆ ಆಗುವ ಸಾಧ್ಯತೆ ಹೆಚ್ಚಾಗಿದ್ದು, ನದಿ ಪಾತ್ರದ ಜನರು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಉಪತಹಶೀಲ್ದಾರ್ ಆರ್. ರವಿ ಮನವಿ ಮಾಡಿದ್ದಾರೆ.

**ಭದ್ರಾ ಒಳಹರಿವು ಹೆಚ್ಚಳ :** ಭದ್ರಾ ಜಲಾಶಯಕ್ಕೆ ಬುಧವಾರ 26 ಸಾವಿರ ಕ್ಯೂಸೆಕ್ಸ್ ಇದ್ದ ಒಳಹರಿವು ಗುರುವಾರ ಬೆಳಿಗ್ಗೆ 32 ಸಾವಿರ ಕ್ಯೂಸೆಕ್ಸ್‌ಗೆ ಏರಿಕೆ ಕಂಡಿತು. ಒಳಹರಿವು ಗುರುವಾರ ಸಂಜೆ ಮತ್ತೊಷ್ಟು ಹೆಚ್ಚಳವಾಗಿದ್ದು, ಜಲಾಶಯದ ನೀರಿನ ಮಟ್ಟ 165 ಅಡಿ ತಲುಪಿದೆ ಎನ್ನಲಾಗಿದೆ.

**ಪುನರ್ವಸು ಮಳೆ :** ಬುಧವಾರದಿಂದ ಪುನರ್ವಸು ಮಳೆ ಪ್ರಾರಂಭವಾಗಿದ್ದು, ಗುರುವಾರ ಮಧ್ಯಾಹ್ನದಿಂದ ಎಲ್ಲಾ ಕಡೆ ಉತ್ತಮ ಮಳೆ ಆಗುತ್ತಿದೆ.

### ಜು. 15 ರ ನಂತರ ನೀರು



**ದೇವರು ರೈತರ ಪರವಾಗಿದ್ದು, ಎಲ್ಲರ ನಿರೀಕ್ಷೆಯಂತೆ ಉತ್ತಮ ಮಳೆ ಆಗುತ್ತಿದೆ. ಭದ್ರಾ ಜಲಾಶಯಕ್ಕೆ ಉತ್ತಮ ಹರಿವು ಇದ್ದು, ಎಲ್ಲಾ ಕಡೆ ಮಳೆ ಆಗುತ್ತಿರುವುದರಿಂದ ತಕ್ಷಣ ನೀರು ಬಿಡಿ ಎಂದು ರೈತರು ಕೇಳುತ್ತಿಲ್ಲ. ಹಾಗಾಗಿ ಜುಲೈ 15 ರ ನಂತರ ನಾಲೆಗಳಿಗೆ ನೀರು ಹರಿಸುವ ಬಗ್ಗೆ ಚಿಂತನೆ ನಡೆದಿದೆ. ಒಂದು ವೇಳೆ ಅಚ್ಚುಕಟ್ಟಿನ ರೈತರು ಅಷ್ಟರೊಳಗೆ ನೀರು ಹರಿಸಿ ಎಂದರೆ ಚರ್ಚಿಸಿ ತೀರ್ಮಾನಿಸುತ್ತೇವೆ ಎಂದು ಭದ್ರಾ ಕಾಡಾ ಅಧ್ಯಕ್ಷೆ ಶ್ರೀಮತಿ ಪವಿತ್ರ ರಾಮಯ್ಯ 'ಜನತಾವಾಣಿ'ಗೆ ತಿಳಿಸಿದರು. ಈಗ ನೀರು ಉಳಿಸುವುದರಿಂದ ಮುಂದೆ ಅನುಕೂಲವಾಗುತ್ತದೆ ಎಂಬುದನ್ನು ಎಲ್ಲಾ ರೈತರು ಅರ್ಥ ಮಾಡಿಕೊಳ್ಳಬೇಕೆಂದು ಅವರು ಮನವಿ ಮಾಡಿದ್ದಾರೆ.**

# ಗೃಹ ಮಂಡಳಿಯಿಂದ ತಿಂಗಳಲ್ಲಿ 6 ಸಾವಿರ ನಿವೇಶನ ವಿತರಣೆ

ಬೆಂಗಳೂರು, ಜು. 7 - ಇನ್ನೊಂದು ತಿಂಗಳಲ್ಲಿ ಗೃಹ ಮಂಡಳಿ ವತಿಯಿಂದ ಆರು ಸಾವಿರ ನಿವೇಶನಗಳನ್ನು ಹಂಚಲಾಗುವುದು ಎಂದು ವಸತಿ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ.

ಇನ್ನೊಂದು ತಿಂಗಳೊಳಗಾಗಿ 6015 ನಿವೇಶನಗಳನ್ನು ಹಾಗೂ 20 ಮನೆಗಳನ್ನು ಇಡೀ ರಾಜ್ಯಾದ್ಯಂತ ಹಂಚಲಾಗುವುದು.

### ಹರಿಹರದ 568 ನಿವೇಶನ ಜು.20ರಂದು ಹಂಚಿಕೆ - ಸಚಿವ ಸೋಮಣ್ಣ

ಮೈಸೂರಿನ ಕೆ.ಆರ್.ಎಸ್. ನಿಸರ್ಗ ಬಡಾವಣೆಯಲ್ಲಿ 523 ನಿವೇಶನಗಳನ್ನು ಜುಲೈ 8 ರಂದು, ದಾವಣಗೆರೆ ಜಿಲ್ಲೆಯ ಹರಿಹರದಲ್ಲಿ ಇದೇ 20 ರಂದು 568 ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು.

ಅಲ್ಲದೇ ಬಳ್ಳಾರಿ, ವಿಜಯಪುರ, ಗದಗ, ಹುನಗುಂದ ಸೇರಿದಂತೆ ರಾಜ್ಯದ ವಿವಿಧೆಡೆ ಬಡಾವಣೆಗಳನ್ನು ನಿರ್ಮಿಸಲಾಗಿದ್ದು ಹಂಚಿಕೆ ಮಾಡಲಾಗುವುದು ಎಂದರು. ನಿವೇಶನ ಹಂಚಿಕೆ ಮಾಡಲು ಮುಖ್ಯ ಇಂಜಿನಿಯರ್ ನೇತೃತ್ವದಲ್ಲಿ ಒಂದು ಸಮಿತಿ ರಚಿಸ ಲಾಗಿದೆ, ಸಮಿತಿಯು ಅರ್ಜಿದಾರರ ಮುಂದೆಯೇ ಸಾರ್ವಜನಿಕವಾಗಿ ಲಾಟರಿ ಎತ್ತಿ, ನಿವೇಶನಗಳನ್ನು ಹಂಚಲಾಗುವುದು ಎಂದು ಸ್ಪಷ್ಟಪಡಿಸಿದರು.

ಬೆಂಗಳೂರಿನಲ್ಲಿ ನಿರ್ಮಿಸಲಾಗುತ್ತಿರುವ ಒಂದು ಲಕ್ಷ ಮನೆಗಳಲ್ಲಿ 1967 ಮನೆಗಳನ್ನು ಒಂದು ತಿಂಗಳಲ್ಲಿ ಜನರಿಗೆ ಹಂಚಿಕೆ (2ನೇ ಪುಟಕ್ಕೆ)

## ಕೆ.ಹೆಚ್.ಬಿ.ಯಿಂದ ಸ್ವತಂತ್ರ ಬಡಾವಣೆ ಇಲ್ಲ

ಬೆಂಗಳೂರು, ಜು. 7 - ಇನ್ನು ಮುಂದೆ ಕರ್ನಾಟಕ ಗೃಹ ಮಂಡಳಿ ವತಿಯಿಂದ ಸ್ವತಂತ್ರವಾಗಿ ಹೊಸ ಬಡಾವಣೆ ನಿರ್ಮಾಣ ಇಲ್ಲ ಎಂದು ವಸತಿ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ.

ಬಡಾವಣೆ ನಿರ್ಮಾಣಕ್ಕೆ ಭೂ ಸ್ವಾಧೀನ ಪ್ರಕ್ರಿಯೆ ಕ್ಲಿಷ್ಟಕರವಾಗಿರುವುದರಿಂದ ಸ್ವತಂತ್ರವಾಗಿ ಬಡಾವಣೆ ನಿರ್ಮಿಸುವ ಕಾರ್ಯ ಕೈಗೆತ್ತಿಕೊಳ್ಳುವುದಿಲ್ಲ. ರೈತರು ಮುಂದೆ ಬಂದರೆ ಅವರ ಸಹಭಾಗಿತ್ವದಲ್ಲಿ ಬಡಾವಣೆಗಳನ್ನು ನಿರ್ಮಿಸಲಾಗುವುದು ಎಂದವರು ಹೇಳಿದ್ದಾರೆ. ಕನಿಷ್ಠ ಐವತ್ತು ಎಕರೆ ಭೂಮಿ (2ನೇ ಪುಟಕ್ಕೆ)

# ಸಾರ್ವಜನಿಕರ ಸುರಕ್ಷತೆಗೆ ಕ್ರಮ

### ಮಾಲ್, ಹೋಟೆಲ್‌ಗಳಲ್ಲಿ ಸಿಸಿಟಿವಿ, ಲೋಹ ಶೋಧಕ, ಭದ್ರತಾ ಸಿಬ್ಬಂದಿ ಕಡ್ಡಾಯ : ಎಡಿಜಿಪಿ (ಕಾನೂನು ಮತ್ತು ಸುವ್ಯವಸ್ಥೆ) ಅಲೋಕ್ ಕುಮಾರ್



ದಾವಣಗೆರೆ, ಜು. 7 - ಸಾರ್ವಜನಿಕ ಸುರಕ್ಷತಾ ಕಾಯ್ದೆ ಹಾಗೂ ಖಾಸಗಿ ಭದ್ರತಾ ಸಂಸ್ಥೆಗಳ ಕಾಯ್ದೆಗಳ ಅನ್ವಯ ಮಾಲ್‌ಗಳು ಮತ್ತು ಹೋಟೆಲ್‌ಗಳೂ ಸೇರಿದಂತೆ, ಎಲ್ಲ ಸಾರ್ವಜನಿಕ ಸಂಸ್ಥೆಗಳು ಭದ್ರತೆಗೆ ವ್ಯವಸ್ಥೆ ಮಾಡಿಕೊಳ್ಳದೇ ಹೋದರೆ, ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎ.ಡಿ.ಜಿ.ಪಿ. (ಕಾನೂನು ಮತ್ತು ಸುವ್ಯವಸ್ಥೆ) ಅಲೋಕ್ ಕುಮಾರ್ ಎಚ್ಚರಿಸಿದ್ದಾರೆ.

ನಗರಕ್ಕೆ ಔಪಚಾರಿಕ ಭೇಟಿ ನೀಡಿದ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಬರುವ ಬಕ್ರೀದ್ ಹಬ್ಬದ ನಂತರ ಸಾರ್ವಜನಿಕ ಸುರಕ್ಷತಾ ಕಾಯ್ದೆ ಕಟ್ಟುನಿಟ್ಟಿನ ಜಾರಿಗೆ ಅಭಿಯಾನ ಆರಂಭಿಸಿ, ಜುಲೈ 31ರ ಒಳಗೆ ಕ್ರಮ ತೆಗೆದುಕೊಳ್ಳಲು ತಿಳಿಸಲಾಗುವುದು ಎಂದು ಹೇಳಿದ್ದಾರೆ.

ಸಾರ್ವಜನಿಕ ಸುರಕ್ಷತಾ ಕಾಯ್ದೆ - 2017ರ ವ್ಯಾಪ್ತಿಗೆ ಬರುವ ಮಾಲ್, ಹೋಟೆಲ್, ಸಿನೆಮಾ ಮಂದಿರ ಇತ್ಯಾದಿಗಳು ಸಿ.ಸಿ.ಟಿ.ವಿ., ಲೋಹ ಶೋಧಕ, ಭದ್ರತಾ ಸಿಬ್ಬಂದಿ ಸೇರಿದಂತೆ ಅಗತ್ಯ ಸುರಕ್ಷತಾ ವ್ಯವಸ್ಥೆ ಹೊಂದುವುದು ಕಡ್ಡಾಯ ಎಂದವರು (2ನೇ ಪುಟಕ್ಕೆ)

### ಡಕಾಯಿತಿಯಿಂದ ಸೈಬರ್ ಕಡೆ ವಂಚಕರು

ಡಕಾಯಿತಿಗಳ ಬದಲು ಸೈಬರ್ ವಂಚನೆಯಿಂದ ಹಣ ಲೂಟಿ ಮಾಡುವ ಪ್ರವೃತ್ತಿ ಸಮಾಜದಲ್ಲಿ ಹೆಚ್ಚಾಗುತ್ತಿದೆ. ಮುಂದಿನ ದಿನಗಳಲ್ಲಿ ಸೈಬರ್ ಅಪರಾಧಗಳ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇರುವುದರಿಂದ, ಪೊಲೀಸ್ ಸಿಬ್ಬಂದಿ ಬದಲಾಗುತ್ತಿರುವ ಪರಿಸ್ಥಿತಿಗೆ ಸಜ್ಜಾಗಬೇಕಿದೆ ಎಂದು ಎ.ಡಿ.ಜಿ.ಪಿ. (ಕಾನೂನು ಮತ್ತು ಸುವ್ಯವಸ್ಥೆ) ಅಲೋಕ್ ಕುಮಾರ್ ಹೇಳಿದ್ದಾರೆ.

ದೈಹಿಕವಾಗಿ ಹಲ್ಲೆ ನಡೆಸಿದರೆ ಹೆಚ್ಚಿನ ಶಿಕ್ಷೆ ಇದೆ. ಆದರೆ, ಆನ್‌ಲೈನ್ ವಂಚನೆಯಲ್ಲಿ ಸಿಕ್ಕಿ ಬೀಳುವ ಅಪಾಯ ಹಾಗೂ ಶಿಕ್ಷೆ ಕಡಿಮೆ. ಹೀಗಾಗಿ ಹಣ ದೋ ಚು ವ ವ ರು (2ನೇ ಪುಟಕ್ಕೆ)

## ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ರಾಜೀನಾಮೆ

ಲಂಡನ್, ಜು. 7 – ಬ್ರಿಟನ್ ಪ್ರಧಾನ ಮಂತ್ರಿ ಬೋರಿಸ್ ಜಾನ್ಸನ್, ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಕನ್ಸರ್ವೇಟಿವ್ ಪಕ್ಷದ ಅವರ ಹಲವಾರು ಸಹೋದ್ಯೋಗಿಗಳು ರಾಜೀನಾಮೆ ನೀಡಿದ ನಂತರ ಬೋರಿಸ್ ಈ ನಿರ್ಧಾರ ತೆಗೆದುಕೊಂಡಿದ್ದಾರೆ. ಕನ್ಸರ್ವೇಟಿವ್ ಪಕ್ಷ ಬರುವ ಅಕ್ಟೋಬರ್‌ನಲ್ಲಿ ಹೊಸ ನಾಯಕನನ್ನು ಆಯ್ಕೆ ಮಾಡಿಕೊಳ್ಳಲಿದೆ. ಅಲ್ಲಿಯವರೆಗೆ ಜಾನ್ಸನ್ ಉಸ್ತುವಾರಿ ಪ್ರಧಾನಿಯಾಗಿ ಮುಂದುವರೆಯಲಿದ್ದಾರೆ.

## ಗೋಧಿ ಹಿಟ್ಟಿನ ರಫ್ತಿನ ಮೇಲೆ ನಿರ್ಬಂಧ

ನವದೆಹಲಿ, ಜು. 7 – ಕಳೆದ ಮೇ ತಿಂಗಳಿನಲ್ಲಿ ಗೋಧಿ ರಫ್ತು ನಿಷೇಧಿಸಿದ್ದ ಕೇಂದ್ರ ಸರ್ಕಾರ, ಈಗ ಗೋಧಿ ಹಿಟ್ಟು, ಮೈದಾ ಹಾಗೂ ರವೆ ರಫ್ತಿನ ಮೇಲೆ ನಿರ್ಬಂಧ ಹೇರಿದೆ. ಜುಲೈ 12ರ ನಂತರ ಈ ಉತ್ಪನ್ನಗಳ ರಫ್ತಿಗೆ ಅಂತರ ಸಚಿವಾಲಯ ಸಮಿತಿಯ ಅನುಮತಿ ಪಡೆಯಬೇಕಿದೆ.

## ಆಹಾರ ಧಾನ್ಯಗಳ ಮೇಲಿನ ಜಿಎಸ್‌ಟಿ ಹಿಂಪಡೆಯಲು ವರ್ತಕರ ಒತ್ತಾಯ

ದಾವಣಗೆರೆ, ಜೂ.7- ಆಹಾರ ಧಾನ್ಯಗಳ ಮೇಲೆ ವಿಧಿಸಲಾಗಿರುವ ಶೇ.5ರಷ್ಟು ಜಿ.ಎಸ್.ಟಿ. ತೆರಿಗೆಯನ್ನು ಹಿಂಪಡೆಯುವಂತೆ ಜಿಲ್ಲಾ ಅಕ್ಕಿ ಗಿರಣಿದಾರರ ಸಂಘ ಹಾಗೂ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಸರ್ಕಾರಕ್ಕೆ ಒತ್ತಾಯಿಸಿದೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲಾ ಅಕ್ಕಿ ಗಿರಣಿದಾರರ ಸಂಘದ ಕಾರ್ಯದರ್ಶಿ ಕೋಗುಂಡಿ ಬಕ್ಕೇಶಪ್ಪ, ಕಳೆದ ಜೂ. 28, 29ರಂದು ಚಂಡೀಘಡದಲ್ಲಿ ನಡೆದ ಜಿ.ಎಸ್.ಟಿ. ಮಂಡಳಿಯ ಸಭೆಯಲ್ಲಿ ಬ್ರಾಂಡ್ ಅಲ್ಲದ ಆಹಾರ ಉತ್ಪನ್ನಗಳ ಮೇಲೆ ಶೇ.5ರಷ್ಟು ಜಿ.ಎಸ್.ಟಿ. ತೆರಿಗೆ ವಿಧಿಸಲಾಗಿದೆ. ಇದರಿಂದ ಅಕ್ಕಿ ಗಿರಣಿದಾರರಿಗಷ್ಟೇ ಅಲ್ಲದೇ, ಜನ ಸಾಮಾನ್ಯರಿಗೂ ಹೊರೆಯಾಗುತ್ತದೆ ಎಂದು ಹೇಳಿದರು.

ಅಕ್ಕಿಗೆ ಶೇ.5ರಷ್ಟು ಜಿ.ಎಸ್.ಟಿ. ವಿಧಿಸಿದರೆ 1 ಕ್ವಿಂ.ಅಕ್ಕಿಗೆ 300 ರೂ.ಗಳಿಂದ 400 ರೂ.ಗಳಷ್ಟು ಬೆಲೆ ಹೆಚ್ಚಾಗಲಿದೆ. ಪ್ರತಿ ಕೆ.ಜಿ. ಅಕ್ಕಿಗೆ 4 ರೂ.ಗಳಷ್ಟು ಹೆಚ್ಚಾಗಲಿದೆ. ಇದು ಸಾಮಾನ್ಯರಿಗೆ (2ನೇ ಪುಟಕ್ಕೆ)

## ನ್ಯಾಯಾಧೀಶರಿಗೆ ವರ್ಗಾವಣೆ ಬೆದರಿಕೆ ಖಂಡಿಸಿ ಪ್ರತಿಭಟನೆ



ಹೊನ್ನಾಳಿ,ಜು.7-ನ್ಯಾಯಾಧೀಶರ ವರ್ಗಾವಣೆ ಬೆದರಿಕೆ ಖಂಡಿಸಿ ಆಮ್ ಆದ್ಮಿ ಪಾರ್ಟಿ ವತಿಯಿಂದ ಇಂದು ಪ್ರತಿಭಟನೆ ನಡೆಸಲಾಯಿತು.

ರಾಜ್ಯಪಾಲರು ಈ ಕೂಡಲೇ ಭ್ರಷ್ಟ ಬಿಜೆಪಿ ರಾಜ್ಯ ಸರ್ಕಾರವನ್ನು ವಜಾಗೊಳಿಸಬೇಕು ಎಂದು ಎಎಪಿಯ ತಾಲ್ಲೂಕು ಅಧ್ಯಕ್ಷ ಗುರುಪಾದಯ್ಯ ಮಠದ್ ಆಗ್ರಹಿಸಿದರು.

ಹೊನ್ನಾಳಿಯಲ್ಲಿ ತಹಶೀಲ್ದಾರ್‌ರ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಿಗೆ ವರ್ಗಾವಣೆ ಬೆದರಿಕೆ ಹಾಕಿದ ಘಟನೆ ನಡೆದಿರುವುದು ಅತ್ಯಂತ ಆಘಾತಕಾರಿ ಬೆಳವಣಿಗೆ ಆಗಿದೆ ಎಂದರು.

ನ್ಯಾಯಾಧೀಶರಿಗೆ ಒತ್ತಡ ಹಾಕುವ ಮೂಲಕ ಸಂವಿಧಾನದ ಆಶಯವನ್ನು ಬುಡಮೇಲು ಮಾಡುತ್ತಿದೆ. ಸರ್ಕಾರದ ಕುತಂತ್ರಕ್ಕೆ ಮಣಿಯದ ನ್ಯಾ. ಎಚ್. ಸಿ. ಸಂದೇಶ್ ಅವರಿಗೆ ಪಕ್ಷವು (2ನೇ ಪುಟಕ್ಕೆ)

## ಆರೋಗ್ಯ ಇಲಾಖೆಯ ಗುತ್ತಿಗೆ ನೌಕರರ ವೇತನ ಹೆಚ್ಚಿಸಲು ಪ್ರಯತ್ನ : ಸಚಿವ ಸುಧಾಕರ್

ಬೆಂಗಳೂರು, ಜು. 7 - ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ಗುತ್ತಿಗೆ-ಹೊರಗುತ್ತಿಗೆ ನೌಕರರ ವೇತನವನ್ನು ಹೆಚ್ಚಳ ಮಾಡಲು ಪ್ರಯತ್ನ ಮಾಡಲಾಗುತ್ತಿದೆ. ಜೊತೆಗೆ ಆರೋಗ್ಯ ವಿಮೆ ವಿಸ್ತರಿಸಲು ಕೂಡ ಸರ್ಕಾರ ಕ್ರಮ ಕೈಗೊಂಡಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.

ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಮುಷ್ಕರ ನಡೆಸುತ್ತಿರುವ ಗುತ್ತಿಗೆ-ಹೊರಗುತ್ತಿಗೆ ನೌಕರರನ್ನು ಭೇಟಿಯಾಗಿ ಚರ್ಚೆ ನಡೆಸಿದ ಬಳಿಕ ಮಾತನಾಡಿದ ಅವರು, ಸರ್ಕಾರದ ಇತಿಮಿತಿಯೊಳಗೆ ಎಲ್ಲಾ ಬೇಡಿಕೆಗಳನ್ನು ಆದಷ್ಟು ಶೀಘ್ರದಲ್ಲಿ (2ನೇ ಪುಟಕ್ಕೆ)


ಜ್ಯೋತಿ ಗ್ಯಾಸ್ ಏಜೆನ್ಸಿ

ಹೌದು!

HP GAS your friendly gas

HP Gas ವಿತರಕರು

ದೀಕ್ಷಿತ್ ರಸ್ತೆ, 1ನೇ ಕ್ರಾಸ್, ಅಶೋಕ ರಸ್ತೆ
ಶ್ರೀ ರಾಘವೇಂದ್ರ ಮಠದ ಹತ್ತಿರ, ಕೆ.ಬಿ.ಬಡಾವಣೆ
ದಾವಣಗೆರೆ- 577 002.

ಕಛೇರಿ ಸ್ಥಳಾಂತರ

ಮೇಲ್ಕಂಡ ಸ್ಥಳದಲ್ಲಿದ್ದ ನಮ್ಮ HP Gas ಏಜೆನ್ಸಿಯ ಕಛೇರಿಯನ್ನು
ದಿನಾಂಕ : 08-07-2022 ರ ಶುಕ್ರವಾರದಿಂದ
ಈ ಕೆಳಕಂಡ ನೂತನ ವಿಳಾಸಕ್ಕೆ ಸ್ಥಳಾಂತರಿಸಲಾಗಿದೆ.
ನಮ್ಮೆಲ್ಲ ಆತ್ಮೀಯ ಗ್ರಾಹಕರು ಬದಲಾದ ವಿಳಾಸದಲ್ಲಿ ದಯಮಾಡಿ
ವ್ಯವಹರಿಸಲು ವಿನಂತಿಸುತ್ತೇವೆ.

ಜ್ಯೋತಿ ಗ್ಯಾಸ್ ಏಜೆನ್ಸಿ
# 430/3, ಕುವೆಂಪು (ಲಾಯರ್) ರಸ್ತೆ, PLD ಬ್ಯಾಂಕ್ ಹತ್ತಿರ,
ಕೆ.ಬಿ.ಬಡಾವಣೆ, ದಾವಣಗೆರೆ-577 002.
ಫೋ.: 08192 250896,270114



ದ್ವಿತೀಯ ವರ್ಷದ ಪುಣ್ಯಸ್ಮರಣೆ



ಶ್ರೀ ಕೃಷ್ಣಮೂರ್ತಿ ಪಿ. ಕುರ್ಡೇಕರ್ (ಉತ್ತಂಗಿ)
ಜನನ : 1963 - ನಿಧನ : 2020

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ... ನೀವು ತೋರಿದ ಹಾದಿಯಲ್ಲಿ
ಮುನ್ನಡೆಯುತ್ತಿರುವ...

ಧರ್ಮಪತ್ನಿ ಮತ್ತು ಮಕ್ಕಳು, ಅಳಿಯಂದಿರು, ಸಹೋದರ-ಸಹೋದರಿಯರು, ಉತ್ತಂಗಿ, ಕುರ್ಡೇಕರ್ ಕುಟುಂಬದವರು

ಉತ್ತಂಗಿ ಜ್ಯುಯಲರ್ಸ್
ಚೌಕಿಪೇಟೆ, ದಾವಣಗೆರೆ.

## ವರ್ಗಾವಣೆ ಬೆದರಿಕೆ ಖಂಡಿಸಿ ಪ್ರತಿಭಟನೆ


**(1ನೇ ಪುಟದಿಂದ)** ನೈತಿಕ ಬೆಂಬಲ ನೀಡುತ್ತದೆ. ಭ್ರಷ್ಟರ ರಕ್ಷಣೆಯನ್ನು ಮಾಡುತ್ತಿರುವ ಮತ್ತು ಸ್ವತಃ ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ಎಸಿಬಿಯನ್ನು ರದ್ದುಗೊಳಿಸಿ ಲೋಕಾ ಯುಕ್ತವನ್ನು ಬಲಪಡಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಎಎಪಿಯ ಹೊನ್ನಾಳಿ ವಿಧಾನಸಭಾ ಕ್ಷೇತ್ರದ ಪ್ರಬಲ ಆಕಾಂಕ್ಷಿ ಸಿಸಿ ಇಂದೂಧರ ಕೂಲಂಬಿ, ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ ಎಸ್.,ಉಪಾಧ್ಯಕ್ಷ ನರಸಿಂಹಪ್ಪ ಆರುಂಡಿ, ಮುಖಂಡ ರಾದ ಡಾ. ಸುರೇಶ್‌ಬಾಬು, ಗದ್ದಿಗೇಶ್ ರಾಜು ಗುಡ್ಡೇಹಳ್ಳಿ, ಸುನಿಲ್, ಬಸವರಾಜ್, ಹನುಮನ ಹಳ್ಳಿ, ಹರೀಶ್ ಜನನಿ, ಯೋಗೇಶ್, ವೀರೇಂದ್ರ ನ್ಯಾಮತಿ, ಮೀನಾಕ್ಷಮ್ಮ ಸೋಗಿಲು, ಸಿದ್ದನಗೌಡ ಕುಮಾರ್ ತುಗ್ಗಲಹಳ್ಳಿ, ಅಸ್ಫಕ್ ಜಾವಿದ್ ಸಾಸ್ವೆಹಳ್ಳಿ, ಹಾಲಸ್ವಾಮಿ ಆರುಂಡಿ, ಮುಂತಾದ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

# ನಾಗಮೋಹನ್ ದಾಸ್ ವರದಿ ಶೀಘ್ರ ಜಾರಿಗೆ ಒತ್ತಾಯ

## ಹರಪನಹಳ್ಳಿಯಲ್ಲಿ ಎಸ್.ಸಿ. ಮತ್ತು ಎಸ್.ಟಿ. ಸಮುದಾಯದ ಮುಖಂಡರ ಸಭೆ

ಹರಪನಹಳ್ಳಿ,ಜು.7- ಪರಿಶಿಷ್ಟ ಜಾತಿ, ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಹೆಚ್ಚಿಸಲು ನಿವೃತ್ತ ನ್ಯಾಯಾಧೀಶ ನಾಗಮೋಹನದಾಸ್ ಆಯೋಗದ ವರದಿಯನ್ನು ಶೀಘ್ರವೇ ಜಾರಿಗೊಳಿಸಬೇಕೆಂದು ಡಿಎಸ್‌ಎಸ್ ಜಿಲ್ಲಾ ಮುಖಂಡ ಎಂ.ಸಿ. ವೀರಸ್ವಾಮಿ ಸರ್ಕಾರಕ್ಕೆ ಒತ್ತಾಯಿಸಿದರು.



ಪಟ್ಟಣದ ಪ್ರವಾಸಿ ಮಂದಿರದಲ್ಲಿ ಎಸ್.ಸಿ. ಮತ್ತು ಎಸ್.ಟಿ. ಸಮುದಾಯದ ಮುಖಂಡರ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕಳೆದ 148 ದಿನಗಳಿಂದ ವಾಲ್ಮೀಕಿ ಪ್ರಸನ್ನಾನಂದಪುರಿ ಸ್ವಾಮಿಗಳು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನಾ ಧರಣಿ ನಡೆಸುತ್ತಿದ್ದಾರೆ.ಆದರೆ ಸರ್ಕಾರ ಯಾವುದೇ ರೀತಿ ಚಕಾರವೆತ್ತುತ್ತಿಲ್ಲ. ಇದು ಶೋಚನೀಯ ಸ್ಥಿತಿಯಾಗಿದೆ ಎಂದರು.

ಮುಖಂಡ ಬಣ್ಣದಮನೆ ಸೋಮಶೇಖರ್ ಮಾತನಾಡಿ, ಎಸ್‌ಟಿ ಸಮುದಾಯದ ಮೀಸಲಾತಿಗಾಗಿ, ಸಾಮಾಜಿಕ ನ್ಯಾಯಕ್ಕಾಗಿ ಸ್ವಾಮೀಜಿಗಳು ಅವಿರತವಾಗಿ ಇತಿಹಾಸದಲ್ಲಿ ಇಲ್ಲಿಯವರೆಗೂ ಯಾರು ಮಾಡದಂತಹ ಹೋರಾಟ ನಡೆಸುತ್ತಿದ್ದರೂ ಸಹ ಸರ್ಕಾರವಾಗಲೀ, ಶಾಸಕ, ಸಂಸದರಾಗಲಿ ಅವರನ್ನು ಸಾಂತ್ವನಗೊಳಿಸುವ ಪ್ರಯತ್ನವನ್ನು ಇದುವರೆಗೂ ಮಾಡುತ್ತಿಲ್ಲ, ಇದಕ್ಕೆ ಮನುವಾದಿಗಳು ಕುಮ್ಮಕ್ಕು ನೀಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ ಮಾತನಾಡಿ, ಮೀಸಲಾತಿ ಹಾಗೂ ನಮ್ಮ ಹಕ್ಕೊತ್ತಾಯಗಳನ್ನು ಈಡೇರಿಸುವಂತೆ ಆಗ್ರಹಿಸಿ ಜು.11 ರಂದು ಹೊಸಪೇಟೆ ಪಟ್ಟಣದಲ್ಲಿನ ಅಂಬೇಡ್ಕರ್ ವೃತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಯಲಿದ್ದು, ಹರಪನಹಳ್ಳಿ ತಾಲ್ಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಎಸ್‌ಸಿ, ಎಸ್‌ಟಿ. ಸಮುದಾಯದ ಬಾಂಧವರು, ಮುಖಂಡರು, ವಿದ್ಯಾರ್ಥಿಗಳು, ಮಹಿಳೆಯರು, ಯುವಕರು ಭಾಗವಹಿಸಿ ಪ್ರತಿಭಟನೆ ಯಶಸ್ವಿಗೊಳಿಸಬೇಕು ಎಂದು ಕರೆ ನೀಡಿದರು.

ಮುಖಂಡರಾದ ಗುಂಡಗತ್ತಿ ಕೊಟ್ರಪ್ಪ, ಕಂಚಿಕೇರಿ ಜಯಲಕ್ಷ್ಮಿ, ಟಿ.ವಿ.ರೇಣುಕಮ್ಮ ಮಾತನಾಡಿ, ಮೀಸಲಾತಿ ನಮ್ಮ ಸಂವಿಧಾನ ಬದ್ಧ ಹಕ್ಕು, ನಮಗೆ ಅಂಬೇಡ್ಕರ್ ಕೊಟ್ಟ ಮೀಸಲಾತಿ ಕೊಡಬೇಕು. ಇದಕ್ಕಾಗಿ ಒಗ್ಗಟ್ಟಿನ ಹೋರಾಟ ಅಗತ್ಯವಿದೆ ಎಂದರು.

ದಿನಾಂಕ ಇದೇ ದಿನಾಂಕ 11 ರಂದು ಜರುಗುವ ಕಾರ್ಯಕ್ರಮದಲ್ಲಿ ಶಾಸಕ ಕರುಣಾಕರ ರೆಡ್ಡಿ ಭಾಗವಹಿಸಬೇಕು ಎಂದು ಶಾಸಕರ ಆಪ್ತ ಸಹಾಯಕರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮನೋಜ್ ತಳವಾರ, ಬಾಲೇನಹಳ್ಳಿ ಕೆಂಚನಗೌಡ, ರಾಯದುರ್ಗದ ಪ್ರಕಾಶ, ಶಿವರಾಜ, ಕೆ.ರಾಜು, ನಾಗರಾಜ, ಮಂಜುನಾಥ ಬಸಾಪುರ, ಕೆ.ಪ್ರಕಾಶ್, ಮೈದೂರು ಮಾರುತಿ, ಸಿ.ಬಸವರಾಜ, ಸಿ.ಪ್ರತಾಪ್, ಹೆಚ್.ಶ್ರೀನಿವಾಸ್, ಸಾಸ್ವಿಹಳ್ಳಿ ನಾಗರಾಜ, ಎನ್.ಅಂಜಿನಪ್ಪ, ಮಂಜುನಾಥ, ಅಣ್ಣಪ್ಪ, ಮಹಿಳಾ ಮುಖಂಡರಾದ ಪದ್ಮಾವತಿ, ಮಂಜುಳಾ, ಪವಿತ್ರ, ಸೇರಿದಂತೆ, ಇತರಿದ್ದರು.

## ಹರಿಹರ : ಹದ ಮಳೆಯಿಂದ ಬಿತ್ತನೆಗೆ ಅನುಕೂಲ



ಹರಿಹರ, ಜ.7- ತಾಲ್ಲೂಕಿನಲ್ಲಿ ಹದವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಬಿತ್ತನೆ ಮಾಡಿದ ಬೆಳೆಗಳು ಬೆಳೆಯಲು ಪೂರಕವಾಗಿವೆ. ಮತ್ತು ಬಿತ್ತನೆ ಆಗದಂತೆ ಇರುವ ಪ್ರದೇಶದಲ್ಲಿ ಬಿತ್ತನೆ ಕಾರ್ಯವನ್ನು ಮಾಡುವುದಕ್ಕೆ ಸಮೃದ್ಧವಾದ ಮಳೆಯಾಗಿದೆ ಎಂದು ಕೃಷಿ ಸಹಾಯಕ ನಿರ್ದೇಶಕ ನಾರನಗೌಡ ತಿಳಿಸಿದರು. ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕಳೆದ 5-6 ದಿನಗಳಿಂದ ಸತತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ತಾಲ್ಲೂಕಿನ ರೈತರ ಮುಖದಲ್ಲಿ ಮಂದಹಾಸ ಮೂಡಿದೆ. ಒಟ್ಟು ತಾಲ್ಲೂಕಿನಲ್ಲಿ ಮುಂಗಾರು ಮೆಕ್ಕೆಜೋಳ ಬಿತ್ತನೆ 32 ಸಾವಿರ ಹೆಕ್ಟೇರ್ ಗುರಿಯನ್ನು ಹೊಂದಿದ್ದು ಅದರಲ್ಲಿ ಈಗಾಗಲೇ 3600 ಹೆಕ್ಟೇರ್ ಬಿತ್ತನೆ ಮಾಡಲಾಗಿದೆ. ಜೊತೆಗೆ 190 ಹೆಕ್ಟೇರ್ ತೊಗರಿ, 15 ಹೆಕ್ಟೇರ್ ಹೆಸರು, ಅಲಸಂದಿ 35 ಹೆಕ್ಟೇರ್ ಮತ್ತು ಸೊಯಬಿನ್ 25 ಹೆಕ್ಟೇರ್ ಬಿತ್ತನೆ ಕಾರ್ಯವನ್ನು ಮಾಡಲಾಗಿದೆ ಎಂದು ಹೇಳಿದರು.

ರೈತರಿಗೆ ಗೊಬ್ಬರ ಬೀಜಗಳ ಕೊರತೆ ಇರುವುದಿಲ್ಲ. ಈಗಾಗಲೇ 18 ನೂರು ಗೊಬ್ಬರ ಸ್ಟಾಕ್ ಇದ್ದು ಅದರಲ್ಲಿ 757 ಕ್ವಿಂಟಲ್ ಯೂರಿಯಾ 1020 ಕ್ವಿಂಟಲ್ ಕಾಂಪೊಸ್ ಗೊಬ್ಬರ ಸ್ಟಾಕ್ ಇರುತ್ತದೆ. ಸೋಮವಾರದಿಂದ ಬೀಜ ಮತ್ತು ಗೊಬ್ಬರ ವಿತರಣೆ ಮಾಡಲಾಗುತ್ತದೆ ಎಂದು ಹೇಳಿದರು.

## ಜಿಎಸ್‌ಟಿ ಹಿಂಪಡೆಯಲು ಒತ್ತಾಯ

**(1ನೇ ಪುಟದಿಂದ)** ಹೊರೆಯಾಗಲಿದೆ ಎಂದರು.

ಈಗಾಗಲೇ ಭತ್ತ ಬೆಳೆಯ ಕೊರತೆ, ದುಬಾರಿ ವಿದ್ಯುತ್ ದರ, ಕಾರ್ಮಿಕರ ಸಮಸ್ಯೆಗಳಿಂದ ಅಕ್ಕಿ ಗಿರಣಿ ಮಾಲೀಕರು ಸಂಕಷ್ಟದಲಿದ್ದಾರೆ. ಈಗಾಗಲೇ ಬೆಳೆದ ಆಹಾರ ಧಾನ್ಯದ ಸಂಸ್ಕರಣಾ ಪ್ರಕ್ರಿಯೆಗೆ ಶೇ.5 ಜಿ.ಎಸ್.ಟಿ.ಯನ್ನು ಸೇವಾ ಶುಲ್ಕದ ರೂಪದಲ್ಲಿ ಕೊಡುತ್ತಿದ್ದೇವೆ. ಆದರೆ ಇದೀಗ ಮತ್ತೆ ಶೇ.5ಜಿ.ಎಸ್.ಟಿ. ವಿಧಿಸಿರುವುದು ಅವೈಜ್ಞಾನಿಕ ಎಂದರು.

ಜಿಲ್ಲಾ ಛೇಂಬರ್ ಆಫ್ ಕಾಮರ್ಸ್ ಕಾರ್ಯದರ್ಶಿ ಅಜ್ಜಂಪುರ ಶೆಟ್ರು ಶಂಭುಲಿಂಗಪ್ಪ ಮಾತನಾಡಿ, ಈ ಹಿಂದೆ ಬ್ರಾಂಡ್ ಉತ್ಪನ್ನಗಳಿಗೆ ಮಾತ್ರ ಜಿ.ಎಸ್.ಟಿ. ವಿಧಿಸಲಾಗುತ್ತಿತ್ತು. ಈಗ ಬ್ರಾಂಡ್ ತೆಗೆದು ಲೇಬಲ್ ಉತ್ಪನ್ನ ಗಳಿಗೂ ಜಿಎಸ್‌ಟಿ ಎನ್ನಲಾಗುತ್ತಿದೆ. ಈ ವಿಷಯದಲ್ಲಿ ಸಾಕಷ್ಟು ಗೊಂದಲವಿದೆ ಎಂದರು.

ಸರ್ಕಾರ ಜಿಎಸ್‌ಟಿ ಮೂಲಕ ಕೇವಲ ಆದಾಯವನ್ನಷ್ಟೇ ಎದುರು ನೋಡುತ್ತಿದೆ. ಒಂದು ಹಂತದಲ್ಲಿ ವಾಣಿಜ್ಯ ತೆರಿಗೆಗಿಂತ ಜಿಎಸ್‌ಟಿ ತೆರಿಗೆ ವ್ಯಾಪಾರಸ್ಥರಿಗೆ, ಜನ ಸಾಮಾನ್ಯರಿಗೆ ಭಾರವಾಗುತ್ತಿದೆ. ಒಮ್ಮೆ ಜಿಎಸ್‌ಟಿ ವಿಧಿಸಿದರೆ ಅದನ್ನು ತೆಗೆದು ಹಾಕುವುದು ಕಷ್ಟ ಎಂದು ಹೇಳಿದರು.

ರಾಜಗೋಪಾಲ ರೆಡ್ಡಿ, ಅನಿಲ್ ಕುಮಾರ್, ಜಾವೇದ್ ಸಾಬ್, ಚಂದ್ರಣ್ಣ, ಬದ್ರಿನಾಥ್, ದಾಗಿನಕಟ್ಟೆ ನಾಗರಾಜಪ್ಪ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

## ಹಿರಿಯ ನಾಗರಿಕರಿಗೆ, ಅಂಗವಿಕಲರಿಗೆ ಕಿವಿ-ಮೂಗು, ಗಂಟಲು ತಪಾಸಣೆ

ದಾವಣಗೆರೆ, ಜು. 7 - ನಗರದ ಎವಿಕೆ ಕಾಲೇಜು ರಸ್ತೆಯಲ್ಲಿ ಶ್ರೀ ಭಗವಾನ್ ಮಹಾವೀರ ಜೈನ್ ಆಸ್ಪತ್ರೆ (ಹಳೇ ಅಶ್ವಿನಿ) ಆಸ್ಪತ್ರೆಯಲ್ಲಿ ಹಿರಿಯ ನಾಗರಿಕರು ಮತ್ತು ಅಂಗವಿಕಲರಿಗೆ ನುರಿತ ಕಿವಿ, ಮೂಗು ಮತ್ತು ಗಂಟಲು ಶಸ್ತ್ರ ಚಿಕಿತ್ಸಾ ವೈದ್ಯರಿಂದ ಉಚಿತ ತಪಾಸಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ವೈದ್ಯರ ಸಲಹೆ ಮೇರೆಗೆ ಉಚಿತವಾಗಿ ಔಷಧಿ ವಿತರಣೆ ಮತ್ತು ಉಚಿತವಾಗಿ ಶ್ರವಣ ಯಂತ್ರಗಳನ್ನು ನೀಡಲಾಗು ವುದು. ಷಾ ಪೂಲ್‌ಚಂದ್ ಅಂಬಾಲಾಲ್ ಇವರು ಶ್ರವಣ ಯಂತ್ರಗಳನ್ನು ಕೊಡುಗೆಯಾಗಿ ನೀಡುವರು. ಉಚಿತವಾಗಿ ಸೌಲಭ್ಯ ಪಡೆಯುವವರು ಆಸ್ಪತ್ರೆ ಮೊ.ನಂ. 96060 48423ಗೆ ಇದೇ ದಿನಾಂಕ 8 ರೊಳಗೆ ನೋಂದಣಿ ಮಾಡಿಸಿಕೊಳ್ಳಬೇಕೆಂದು ಆಸ್ಪತ್ರೆಯ ಕಮಿಟಿ ಟ್ರಸ್ಟ್‌ನ ಅಧ್ಯಕ್ಷ ಸಂಘವಿ ಮಹಾವೀರ್ ಜೈನ್ ವಿನಂತಿಸಿದ್ದಾರೆ.

### ಕುರುಬರಹಳ್ಳಿ ಗ್ರಾಮದ ಕೆ.ಜಿ.ಪ್ರಕಾಶ್ ನಿಧನ



ಚನ್ನಗಿರಿ ತಾಲ್ಲೂಕು ಚಿಕ್ಕ ಕುರುಬರಹಳ್ಳಿ ಗ್ರಾಮದ ವಾಸಿ ಕೆ.ಜಿ.ಪ್ರಕಾಶ್ (ದೊಡ್ಡಪ್ಪ) ಅವರು, ದಿನಾಂಕ: 7.7.2022 ರ ಗುರುವಾರ ನಿಧನರಾದರು. ಮೃತರಿಗೆ 58 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸಹೋದರ, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ:8.7.2022 ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಮೃತರ ಸ್ವಗ್ರಾಮದಲ್ಲಿ ನೆರವೇರಿಸಲಾಗುವುದು.

### ಹೆಚ್. ಸರೋಜಮ್ಮ ನಿಧನ



ದಾವಣಗೆರೆ ಕೆಟಿಜೆ ನಗರ 3ನೇ ಮೇನ್, 11ನೇ ಕ್ರಾಸ್ ವಾಸಿ, ಕಾಮನಹಳ್ಳಿ ಬಿ.ಎಂ. ಜಯಪ್ಪನವರ ಧರ್ಮಪತ್ನಿ ಶ್ರೀಮತಿ ಸರೋಜಮ್ಮ (72) ಅವರು ದಿನಾಂಕ 7.7.2022ರ ಗುರುವಾರ ರಾತ್ರಿ 8.25ಕ್ಕೆ ನಿಧನರಾದರು. ಪತಿ, ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 8.7.2022ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.


॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**



**ಶ್ರೀಮತಿ ಮಂಜುಳ, ಶ್ರೀ ಬಿಸಲೇರಿ ಬಸವರಾಜ್**
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 04.07.2022ನೇ ಸೋಮವಾರ ರಾತ್ರಿ 2.30 ಗಂಟೆಗೆ ನನ್ನ ತಮ್ಮನಾದ
**ಶ್ರೀ ಬಿಸಲೇರಿ ವಿರೂಪಾಕ್ಷಿಯವರು**
(ಶ್ರೀಮತಿ ಅರುಣರವರ ಪೂಜ್ಯ ಪತಿಯವರು)
ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**"ಕೈಲಾಸ ಶಿವಗಣಾರಾಧನೆ"ಯನ್ನು**
ದಿನಾಂಕ : 8.7.2022ನೇ ಶುಕ್ರವಾರ ಮಧ್ಯಾಹ್ನ 12.15ಕ್ಕೆ, ಶ್ರೀ ಗುಂಡಿ ಮಹಾದೇವಪ್ಪನವರ ಕಲ್ಯಾಣ ಮಂಟಪ, ಎಂಸಿಸಿ 'ಬಿ' ಬ್ಲಾಕ್, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಅರುಣ ವಿರುಪಾಕ್ಷಿ
ಕು॥ ಅಮೂಲ್ಯ, ಚಿ॥ ಪ್ರೇಮ್, ಶ್ರೀಮತಿ ಅನಿತಾ, ಶ್ರೀ ಬಿಸಲೇರಿ ಸಿದ್ದೇಶಿ
ಶ್ರೀಮತಿ ವೀಣಾ, ಶ್ರೀ ಬಿಸಲೇರಿ ಶಂಕರ್
ಶ್ರೀಮತಿ ನಂದಿನಿ, ಶ್ರೀ ಬಿಸಲೇರಿ ಜಗದೀಶ್
ಸಹೋದರಿಯರು, ಅಳಿಯಂದಿರು, ಮಕ್ಕಳು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.


## ತಿಂಗಳಲ್ಲಿ 6 ಸಾವಿರ ನಿವೇಶನ ವಿತರಣೆ

**(1ನೇ ಪುಟದಿಂದ)** ಮಾಡಲಾಗುವುದು ಎಂದು ಇದೇ ಸಂದರ್ಭದಲ್ಲಿ ಅವರು ಹೇಳಿದರು. ಇದೇ ರೀತಿ ಸದರಿ ಯೋಜನೆಯಡಿ ಈ ವರ್ಷ ಜನರಿಗೆ ಇಪ್ಪತ್ತು ಸಾವಿರ ಮನೆಗಳನ್ನು ಮಂಜೂರು ಮಾಡುವುದಾಗಿ ನುಡಿದ ಅವರು, ಪ್ರತಿ ಮನೆಗೆ ಸಾಮಾನ್ಯ ವರ್ಗದವರು ಆರೂವರೆ ಲಕ್ಷ ರೂಪಾಯಿ ಪಾವತಿಸಬೇಕು. ಪರಿಶಿಷ್ಟ ಜಾತಿ, ವರ್ಗದವರು ಐದು ಲಕ್ಷ ರೂಪಾಯಿ ಪಾವತಿಸಬೇಕು ಎಂದರು.

ಹುಡ್ಕೋದಿಂದ 500 ಕೋಟಿ ರೂಪಾಯಿ ಸಾಲ ಪಡೆದು ಸರ್ಕಾರವೇ ಈ ಒಂದು ಲಕ್ಷ ಮನೆಗಳನ್ನು ನಿರ್ಮಿಸುವ ಕೆಲಸವನ್ನು ಪೂರ್ಣಗೊಳಿಸುತ್ತಿದ್ದು ಹಂಚಿಕೆಗೂ ಮುನ್ನವೇ ಬಡವರಿಂದ ಮುಂಗಡವಾಗಿ ಹಣ ಪಡೆಯದಿರಲು ತೀರ್ಮಾನಿಸಲಾಗಿದೆ ಎಂದರು.

ಮನೆ ಹಂಚಿಕೆಯಾದ ನಂತರ ಸದರಿ ಮನೆಯ ದಾಖಲೆಯನ್ನು ಬ್ಯಾಂಕುಗಳಲ್ಲಿ ಅಡಮಾನವಿಡುತ್ತೇವೆ. ಮನೆ ಪಡೆದವರು ಈ ಸಾಲದ ಮೇಲಿನ ಕಂತು ಕಟ್ಟಿಕೊಂಡು ಹೋಗುತ್ತಾರೆ ಎಂದರು.

### ಸ್ವತಂತ್ರ ಬಡಾವಣೆ ಇಲ್ಲ

**(1ನೇ ಪುಟದಿಂದ)** ಒದಗಿಸಲು ರೈತರು ಸಜ್ಜಾದರೆ ಅಂಥವರ ಜತೆ ಒಪ್ಪಂದ ಮಾಡಿಕೊಂಡು ನಿವೇಶನಗಳನ್ನು ಅಭಿವೃದ್ಧಿಪಡಿಸುತ್ತೇವೆ ಎಂದ ಅವರು ಜಿಲ್ಲಾ ಮಟ್ಟದಲ್ಲಿ ಈ ಸಹಭಾಗಿತ್ವದಡಿ ಸರ್ಕಾರಕ್ಕೆ ಶೇಕಡಾ ಐವತ್ತರಷ್ಟು ಪಾಲು ನೀಡಬೇಕು,ಉಳಿದ ಐವತ್ತರಷ್ಟು ಭೂಮಿಯನ್ನು ಅಭಿವೃದ್ಧಿಪಡಿಸಿ ರೈತರಿಗೆ ಕೊಡುತ್ತೇವೆ ಎಂದು ನುಡಿದರು.

ಇದೇ ರೀತಿ ತಾಲ್ಲೂಕು ಮಟ್ಟದಲ್ಲಿ ರೈತರು ಒದಗಿಸುವ ಭೂಮಿಗೆ ಶೇಕಡ 60:40 ರ ಅನುಪಾತದಲ್ಲಿ ಒಪ್ಪಂದ ಮಾಡಿಕೊಳ್ಳಲಾಗುವುದು ಎಂದ ಅವರು, ಅಭಿವೃದ್ಧಿಪಡಿಸಿದ ಭೂಮಿಯಲ್ಲಿ ಶೇಕಡಾ 60 ರಷ್ಟು ಭೂಮಿಯನ್ನು ಸರ್ಕಾರ ಇಟ್ಟುಕೊಂಡು ಶೇಕಡಾ 40 ರಷ್ಟು ಭೂಮಿಯನ್ನು ರೈತರಿಗೆ ಬಿಟ್ಟು ಕೊಡಲಿದೆ ಎಂದು ನುಡಿದರು.

ಕೇವಲ ಭೂ ಒಡೆಯರಾದ ರೈತರ ಜತೆ ಮಾತ್ರ ಸಹಭಾಗಿತ್ವ ಮಾಡಿಕೊಳ್ಳಲಾಗುವುದೇ ವಿನಃ ನಮ್ಮ ಬಳಿ ಭೂಮಿ ಇದೆ ಎಂದು ರೈತರಲ್ಲದವರದು ಮುಂದೆ ಬಂದರೆ ಅದನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಸ್ಪಷ್ಟ ಪಡಿಸಿದರು.

ಭೂ ಸ್ವಾಧೀನ ಕಾರ್ಯದಲ್ಲಿ ಉಂಟಾದ ವಿಳಂಬದಿಂದ ಕಳೆದ ಹಲವು ಕಾಲದಿಂದ ಜನರಿಗೆ ಮನೆ, ನಿವೇಶನ ನೀಡುವ ಕೆಲಸವಾಗಿರಲಿಲ್ಲ ಎಂದು ಸ್ಪಷ್ಟಡಿಸಿದರು. ಇಷ್ಟಾದರೂ ನಾನು ಅಧಿಕಾರಕ್ಕೆ ಬಂದ ಮೇಲೆ 65 ಯೋಜನೆಗಳನ್ನು ಕೈಗೆತ್ತಿಕೊಂಡಿದ್ದು ಜನರಿಗೆ ಅಂತಿಮ ಕಂತಿನಲ್ಲಿ ಆರು ಸಾವಿರ ಮನೆಗಳನ್ನು ಒದಗಿಸಲು ತೀರ್ಮಾನಿಸಲಾಗಿದೆ ಎಂದರು.

## ಹೊನ್ನಾಳಿ ಸರ್ಕಾರಿ ನೌಕರರ ಸಂಘದಿಂದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಹೊನ್ನಾಳಿ, ಜು.7- ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ವರ್ಗದ ಮಕ್ಕಳು ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಶೇ. 90 ರಷ್ಟು ಅಂಕ ಗಳಿಸಿ ಸಾಧನೆಗೈದ ಮಕ್ಕಳ ಪ್ರತಿಭಾ ಪುರಸ್ಕಾರಕ್ಕೆ ಆನ್ಲೈನ್‌ನಲ್ಲಿ ಅರ್ಜಿ ಕರೆಯಲಾಗಿದೆ ಎಂದು ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಬಿ.ಕುಮಾರ ಹೇಳಿದರು.

ಭರ್ತಿ ಮಾಡಿದ ಅರ್ಜಿಗಳನ್ನು ಆನ್ ಲೈನ್ ನಲ್ಲಿ ಇದೇ ದಿನಾಂಕ 15 ರೊಳಗೆ ಸಲ್ಲಿಸ ಬಹುದಾಗಿದೆ. ಈ ಅರ್ಜಿಗಳನ್ನು ರಾಜ್ಯ ಮಟ್ಟಕ್ಕೆ ತಲುಪಿಸಲಾಗುವುದು. ಜಿಲ್ಲಾ ವ್ಯಾಪ್ತಿಗಳಲ್ಲಿ ಪ್ರತಿಭಾ ಪುರಸ್ಕಾರ ಸಮಾರಂಭ ನಡೆಸುವ ಬಗ್ಗೆ ಸಂಘವು ಚರ್ಚೆ ನಡೆಸಿದೆ ಎಂದರು. ಈ ಸಂದರ್ಭದಲ್ಲಿ ರಾಜ್ಯ ಪರಿಷತ್ ಸದಸ್ಯ ಟಿ.ಪಿ. ರವಿಕುಮಾರ, ಕಾರ್ಯದರ್ಶಿ ರವಿ, ಖಜಾಂಚಿ ಮಹೇಂದ್ರ ಕುಮಾರ, ತೋಟಪ್ಪ ಇದ್ದರು.


**ನಾಗರಾಜ ಸಿ.ಟಿ ನಿಧನ**



ದಾವಣಗೆರೆ ಸರಸ್ವತಿ ಬಡಾವಣೆ #1342/17, 6ನೇ ಕ್ರಾಸ್, ಬಿ ಬ್ಲಾಕ್ ಅಕ್ಷಯಲಕ್ಷ್ಮಿ ವಾಸಿ ಮಾಯಕೊಂಡ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಿವೃತ್ತ ಮುಖ್ಯಶಿಕ್ಷಕಿಯಾದ ಶ್ರೀಮತಿ ರೇಣುಕಾ ಇವರ ಪತಿ
**ನಾಗರಾಜ ಸಿ.ಟಿ** (ನಿವೃತ್ತ ಡೆಪ್ಯೂಟಿ ತಹಶೀಲ್ದಾರ್)
ಇವರು, ದಿನಾಂಕ 7.7.2022ರ ಗುರುವಾರ ಬೆಳಗ್ಗೆ 10.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 75 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 8.7.2022ರ ಶುಕ್ರವಾರ ಸಂಜೆ 5 ಗಂಟೆಗೆ ಮುಂಡರಗಿ ತಾಲ್ಲೂಕು ಹಮ್ಮಿಗ್ಗೆ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ಮೃತರ ಪಾರ್ಥಿವ ಶರೀರವನ್ನು ಸರಸ್ವತಿ ಬಡಾವಣೆ #1342/17, 6ನೇ ಕ್ರಾಸ್ ಬಿ ಬ್ಲಾಕ್ ಅಕ್ಷಯಲಕ್ಷ್ಮಿ ನಿವಾಸದಲ್ಲಿ ಬೆಳಿಗ್ಗೆ 11 ಗಂಟೆಯವರೆಗೆ ಅಂತಿಮ ದರ್ಶನಕ್ಕೆ ಇಡಲಾಗುವುದು.

ದುಃಖತಪ್ತ ಕುಟುಂಬ ವರ್ಗ - ಮೊ. 94482-57507


## ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

ದಾವಣಗೆರೆ, ಜು. 7 - ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ. 90 ಕ್ಕಿಂತ ಹೆಚ್ಚು ಅಂಕ ಪಡೆದ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದು ಸಂಘದ ಜಿಲ್ಲಾಧ್ಯಕ್ಷ ಬಿ. ಪಾಲಾಕ್ಷಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜು.15 ರೊಳಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ, ಪತ್ರಿಕಾಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಸಿ. ಗುರುಮೂರ್ತಿ, ಖಜಾಂಚಿ ಪಿ.ಆರ್. ತಿಪ್ಪೇಸ್ವಾಮಿ, ಗೌರವಾಧ್ಯಕ್ಷ ಡಾ. ಜಿ. ಉಮೇಶ್, ವೇಣು ಉಪಸ್ಥಿತರಿದ್ದರು.


॥ ಶ್ರೀ ವೆಂಕಟೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ಸಿಟಿ ಶಾಮನೂರು ವಾಸಿ
**ಶ್ರೀ ಕಾಡಜ್ಜಿ ಹನುಮಂತಪ್ಪ ಮತ್ತು ಸಹೋದರರು**
ಮಾಡುವ ವಿಜ್ಞಾಪನೆಗಳು.
ದಿನಾಂಕ 30.6.2022ರ ಗುರುವಾರ ಬೆಳಗಿನಜಾವ 12.30ಕ್ಕೆ ನಮ್ಮ ಪೂಜ್ಯ ತಾಯಿಯವರಾದ
**ಶ್ರೀಮತಿ ಕಾಡಜ್ಜಿ ಗೌರಮ್ಮನವರು**
(ದಿ. ಶ್ರೀ ಕಾಡಜ್ಜಿ ತಿಮ್ಮಪ್ಪನವರ ಧರ್ಮಪತ್ನಿ)
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು** ದಿನಾಂಕ 8.7.2022ರ ಶುಕ್ರವಾರ ಬೆಳಿಗ್ಗೆ 9.30ಕ್ಕೆ ಶಾಮನೂರಿನ ಮೃತರ ಸ್ವಗೃಹದಲ್ಲಿ ನೆರವೇರಿಸಲು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ರೇಖಾ ಶ್ರೀ ಕಾಡಜ್ಜಿ ಹನುಮಂತಪ್ಪ ಮತ್ತು
ಶ್ರೀಮತಿ ರತ್ನ ಶ್ರೀ ಕಾಡಜ್ಜಿ ಗಿರೀಶ್ ಮತ್ತು ಮಕ್ಕಳು, ಶ್ರೀಮತಿ ಆಶಾ ಶ್ರೀ ರಮೇಶ್
ಕಾಡಜ್ಜಿ ವಂಶಸ್ಥರು ಹಾಗೂ ಬಂಧು-ಮಿತ್ರರು, ಶಾಮನೂರು. ಮೊ. 87480-71153, 78923-09477

ವಿ.ಸೂ : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.


# ಸಾರ್ವಜನಿಕರ ಸುರಕ್ಷತೆಗೆ ಕ್ರಮ

**(1ನೇ ಪುಟದಿಂದ)** ತಿಳಿಸಿದರು.

ಸಿ.ಸಿ.ಟಿ.ವಿ.ಗಳಲ್ಲಿ ಇನ್‌ಫ್ರಾ ರೆಡ್ ಸೌಲಭ್ಯ ಇರಬೇಕು ಹಾಗೂ 30 ದಿನಗಳವರೆಗೆ ದೃಶ್ಯಗಳನ್ನು ಕಾಯ್ದಿರಿಸುವ ಸಾಮರ್ಥ್ಯ ಇರಬೇಕು ಎಂದು ಅಲೋಕ್ ಕುಮಾರ್ ಹೇಳಿದರು. ಖಾಸಗಿ ಸುರಕ್ಷತಾ ಸಂಸ್ಥೆಗಳೂ ಸಹ ತಾವು ಒದಗಿಸುವ ಭದ್ರತಾ ಸಿಬ್ಬಂದಿಗೆ ತರಬೇತಿ ಕೊಡಿಸಿರಬೇಕು. ಇಲ್ಲವಾದರೆ ಅವರ ಅನುಮತಿ ರದ್ದುಗೊಳಿಸಲಾಗುವುದು ಎಂದವರು ಎಚ್ಚರಿಕೆ ನೀಡಿದರು.

ಹುಬ್ಬಳ್ಳಿಯ ತಾರಾ ಹೋಟೆಲ್ ಒಂದರಲ್ಲಿ ಸರಳ ವಾಸ್ತು ಚಂದ್ರಶೇಖರ್ ಗುರೂಜಿ ಹತ್ಯೆ ಪ್ರಕರಣದ ಹಿನ್ನೆಲೆಯಲ್ಲಿ ಎಡಿಜಿಪಿ ನೀಡಿರುವ ಎಚ್ಚರಿಕೆ ಪ್ರಾಮುಖ್ಯತೆ ಪಡೆದಿದೆ.

**ತಿಂಗಳ ಟಾಪರ್ :** ಪೊಲೀಸ್ ಕಾರ್ಯ ನಿರ್ವಹಣೆಗೆ ಸೂಕ್ತ ಉತ್ತೇಜನ ನೀಡಬೇಕು. ಇದಕ್ಕಾಗಿ ಪ್ರತಿ ತಿಂಗಳ ಕಾರ್ಯನಿರ್ವಹಣೆ ಪರಿಶೀಲಿಸಿ, ಉತ್ತಮ ಕೆಲಸ ಮಾಡಿದವರಿಗೆ ತಿಂಗಳ ಟಾಪರ್ ಎಂಬ ಗೌರವ ನೀಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿರುವುದಾಗಿ ಹೇಳಿದರು.

**ರೌಡಿಗಳ ನಿಗ್ರಹ :** ಸಮಾಜಕ್ಕೆ ಕಂಟಕವಾಗುವ ರೌಡಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು. ಜಾತಿ ಹಾಗೂ ಕೋಮು ಸಂಘರ್ಷಕ್ಕೆ ಕಾರಣವಾಗುವವರಿಂದ ಹಿಡಿದು ವೈಯಕ್ತಿಕ ಜಮೀನುಗಳ ವ್ಯವಹಾರದವರೆಗೆ ಇರುವ ರೌಡಿಗಳನ್ನು ನಿಗ್ರಹಿಸಲಾಗುವುದು. ರೌಡಿಗಳ ವಿರುದ್ಧ ಯಾವುದೇ ವಾರಂಟ್ ಬಾಕಿ ಇದ್ದರೆ ತಕ್ಷಣ ಜಾರಿಗೆ ತರಲಾಗುವುದು ಎಂದು ಅಲೋಕ್ ಕುಮಾರ್ ಹೇಳಿದರು.

**ಸುಳ್ಳು ಪ್ರಕರಣಗಳ ಬಗ್ಗೆ ಎಚ್ಚರಿಕೆ :** ಪೋಕ್ಸೋ, ವರದಕ್ಷಿಣೆ ಸೇರಿದಂತೆ ಹಲವಾರು ಕಾಯ್ದೆಗಳನ್ನು ದುರ್ಬಳಕೆ ಮಾಡಿಕೊಳ್ಳುವವರ ಸಂಖ್ಯೆ ಹೆಚ್ಚಾಗುತ್ತಿದೆ. ಈ ಬಗ್ಗೆ ಪೊಲೀಸರು ವಿವೇಚನೆಯಿಂದ ವರ್ತಿಸಬೇಕು. ಸಾಕ್ಷಿಗಳು ಇದ್ದಾಗ ಮಾತ್ರ ಕ್ರಮ ತೆಗೆದುಕೊಳ್ಳಬೇಕು ಎಂದವರು ತಿಳಿಸಿದರು.

### ಮಾದಕ ಬಳಕೆದಾರರ ವಿರುದ್ಧವೂ ಕ್ರಮ

ಇದುವರೆಗೆ ಮಾದಕ ಪೂರೈಕೆದಾರರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುತ್ತಿತ್ತು. ಮಾದಕ ಬಳಕೆದಾರರ ವಿರುದ್ಧ ಕ್ರಮ ತೆಗೆದುಕೊಳ್ಳಲು ಹೋದರೆ ವಿದ್ಯಾರ್ಥಿಗಳು ಹಾಗೂ ವೇತನದಾರರಿಗೆ ಸಮಸ್ಯೆಯಾಗಬಹುದು ಎಂಬ ಕಾಳಜಿ ಇತ್ತು. ಆದರೆ, ಇನ್ನು ಮುಂದೆ ಮಾದಕ ಬಳಕೆ ಮಾಡುವವರ ವಿರುದ್ಧವೂ ಎನ್.ಡಿ.ಪಿ.ಎಸ್. ಕಾಯ್ದೆಯಡಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎ.ಡಿ.ಜಿ.ಪಿ. (ಕಾನೂನು ಮತ್ತು ಸುವ್ಯವಸ್ಥೆ) ಅಲೋಕ್ ಕುಮಾರ್ ತಿಳಿಸಿದ್ದಾರೆ.

### ಜಾಲತಾಣಗಳ ಮೇಲೆ ನಿಗಾ

ಸಾಮಾಜಿಕ ಜಾಲತಾಣಗಳ ಮೂಲಕ ಹಿಂಸೆಗೆ ಕುಮ್ಮಕ್ಕು ನೀಡುತ್ತಿರುವವರ ವಿರುದ್ಧ ಕಾನೂನು ಪ್ರಕಾರ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ಜಾಲತಾಣಕ್ಕೆ ಸಂಬಂಧಿಸಿದ ಯಾವುದೇ ಘಟನೆಯನ್ನು ಸಣ್ಣದು ಎಂದು ನಿರ್ಲಕ್ಷಿಸುವುದಿಲ್ಲ ಎಂದು ಎಡಿಜಿಪಿ (ಕಾನೂನು ಮತ್ತು ಸುವ್ಯವಸ್ಥೆ) ಅಲೋಕ್ ಕುಮಾರ್ ಹೇಳಿದ್ದಾರೆ.

ಇತ್ತೀಚೆಗೆ ಹಳ್ಳಿಗಳಲ್ಲೂ ಸಹ ಸಾಮಾಜಿಕ ಜಾಲತಾಣಗಳ ಮೂಲಕ ಭಾವನೆಗಳ ಕೆರಳಿಸುವುದು ಕಂಡು ಬರುತ್ತಿದೆ. ಸಣ್ಣ ಘಟನೆಗಳೂ ಸಹ ದೊಡ್ಡದಾಗಿ ಬೆಳೆಯಬಹುದು. ಹೀಗಾಗಿ ಸೂಕ್ತ ಎಚ್ಚರಿಕೆ ವಹಿಸಲಾಗುತ್ತಿದೆ ಎಂದವರು ತಿಳಿಸಿದರು.

### ಡಕಾಯತಿಯಿಂದ ಸೈಬರ್ ಕಡೆ ವಂಚಕರು

**(1ನೇ ಪುಟದಿಂದ)** ಆನ್‌ಲೈನ್ ಮೊರೆ ಹೋಗುತ್ತಿದ್ದಾರೆ ಎಂದವರು ತಿಳಿಸಿದರು. ಸೈಬರ್ ಸುರಕ್ಷತೆ ಬಗ್ಗೆ ಜನರು ಹೆಚ್ಚಿನ ತಿಳುವಳಿಕೆ ಹೊಂದಬೇಕು. ಪೊಲೀಸ್ ಇಲಾಖೆ ಸಹ ಈ ಬಗ್ಗೆ ಜನರಲ್ಲಿ ಹೆಚ್ಚಿನ ಅರಿವು ಮೂಡಿಸಬೇಕು ಎಂದು ಹೇಳಿದರು.

**ದಾಳಿಕೋರ ಮನೋಭಾವ :** ಜನರಲ್ಲಿ ಇತ್ತೀಚಿನ ದಿನಗಳಲ್ಲಿ ದಾಳಿಕೋರ ಮನೋಭಾವ ಹೆಚ್ಚಾಗುತ್ತಿರುವುದು ಕಂಡು ಬಂದಿದೆ. ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ ಘಟನೆಗಳೂ ನಡೆದಿವೆ. ಈ ರೀತಿ ಹಲ್ಲೆ ನಡೆಸುವವರನ್ನು ರೌಡಿ ಪಟ್ಟಿಗೆ ಸೇರಿಸಿ ಕಾನೂನು ರೀತಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಅಲೋಕ್ ಕುಮಾರ್ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಈ ಸಂದರ್ಭದಲ್ಲಿ ಪೂರ್ವ ವಲಯ ಐಜಿಪಿ ತ್ಯಾಗರಾಜನ್, ಜಿಲ್ಲಾಧಿಕಾರಿ ಸಿ.ಬಿ. ರಿಷ್ಯಂತ್, ಚಿತ್ರದುರ್ಗ ಜಿಲ್ಲಾಧಿಕಾರಿ ಪರಶುರಾಮ್ ಮತ್ತಿತರರು ಉಪಸ್ಥಿತರಿದ್ದರು.

## ಗುತ್ತಿಗೆ ನೌಕರರ ವೇತನ ಹೆಚ್ಚಿಸಲು ಪ್ರಯತ್ನ

**(1ನೇ ಪುಟದಿಂದ)** ಈಡೇರಿಸಲಾಗುವುದು. ಶ್ರೀನಿವಾಸಾಚಾರಿಯವರ ವರದಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸರ್ಕಾರ ಕ್ರಮ ಕೈಗೊಳ್ಳುತ್ತಿದೆ ಎಂದು ಹೇಳಿದರು.

ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರು ಖಾಯಂ ನೌಕರರಿಗೆ ಕೊಡುವಷ್ಟೇ ವೇತನವನ್ನು ನಮಗೂ ಕೊಡಬೇಕು ಎಂದು ಬೇಡಿಕೆ ಇಟ್ಟಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಂಟಿಯಾಗಿ 49 ಕಾರ್ಯಕ್ರಮಗಳನ್ನು ನಿರ್ದಿಷ್ಟ ಸಮಯದ ತನಕ ಮಾಡಲಿದೆ.

ಹೀಗಾಗಿ ಅವರನ್ನು ಖಾಯಂ ನೌಕರರನ್ನಾಗಿ ಮಾಡಿಕೊಳ್ಳಲು ಅಡಚಣೆಗಳಿವೆ. ಅಷ್ಟೇ ಅಲ್ಲದೆ, ಖಾಯಂ ನೌಕರರಂತೆ ಸಮಾನ ವೇತನ ಕೊಡಲು ಸಾಧ್ಯವಾಗುತ್ತಿಲ್ಲ. ಆದರೆ ಈಗಿರುವ ವೇತನವನ್ನು ಹೆಚ್ಚಿಸಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.


ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರು ಆರೋಗ್ಯ ವಿಮೆ ವಿಸ್ತರಣೆ, 10 ದಿನಗಳ ವೇತನ ಸಹಿತ ರಜೆಯ ಬೇಡಿಕೆಗಳನ್ನು ಇಟ್ಟಿದ್ದಾರೆ. ಇದಕ್ಕೆ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಲಿದೆ.

ಪ್ರತಿಭಟನಾ ನಿರತ ನೌಕಕರು ಕೇಳಿರುವ ಎಲ್ಲಾ ಬೇಡಿಕೆಗಳಿಗೆ ಸ್ಪಂದಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಿದ್ದೇವೆ. ಸರ್ಕಾರ ಅವರ ಪರವಾಗಿ ಕೆಲಸ ಮಾಡಲಿದೆ ಎಂದು ಸ್ಪಷ್ಟಪಡಿಸಿದರು.

ದೇಶದಲ್ಲೇ ಆರೋಗ್ಯ ಸೇವೆ ನೀಡುವಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಅದಕ್ಕೆ ಪೂರಕವಾಗಿ ಕೆಲಸ ನಡೆಯಬೇಕು. ನೌಕರರು ಮುಷ್ಕರ ಕೈ ಬಿಟ್ಟು ಶೀಘ್ರದಲ್ಲೇ ಸೇವೆಗೆ ಹಿಂದಿರುಗಬೇಕು ಎಂದು ಸಚಿವರು ಮನವಿ ಮಾಡಿದರು.


॥ ಶ್ರೀ ಬಳ್ಳಿಗಾವಿ ಬಸವೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**



**ಶ್ರೀಮತಿ ಪುಷ್ಪ ಸಿ. ಬೆಳಗಾವಿ**
ಪಿ.ಜೆ. ಬಡಾವಣೆ, ದಾವಣಗೆರೆ
ಇವರು ಮಾಡುವ ವಿಜ್ಞಾಪನೆಗಳು.
ನನ್ನ ಪೂಜ್ಯ ಪತಿಯವರಾದ
**ಶ್ರೀ ಬೆಳಗಾವಿ ಚನ್ನಬಸಪ್ಪ**
ಇವರು ದಿನಾಂಕ : 04.07.2022ನೇ ಸೋಮವಾರದಂದು ದೈವಾಧೀನರಾಗಿದ್ದರಿಂದ ಇವರ
**"ಶಿವಗಣಾರಾಧನೆ"ಯನ್ನು**
ದಿನಾಂಕ : 08.07.2022ನೇ **ಶುಕ್ರವಾರ ಬೆಳಗ್ಗೆ 11.00ಕ್ಕೆ ಶ್ರೀ ಸುಕೃತೀಂದ್ರ ಕಲಾ ಮಂದಿರ, ಎಂ.ಸಿ.ಸಿ. ಎ ಬ್ಲಾಕ್, ದಾವಣಗೆರೆ,** ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ಇಂತಿ ದುಃಖತಪ್ತರು :
**ಶ್ರೀಮತಿ ಪುಷ್ಪ ಸಿ. ಬೆಳಗಾವಿ, ಪುತ್ರಿ, ಪುತ್ರ, ಅಳಿಯ, ಸೊಸೆ ಹಾಗೂ ಮೊಮ್ಮಕ್ಕಳು ಮತ್ತು ಬೆಳಗಾವಿ ಬಂಧು-ಮಿತ್ರರು.**


## ತೊಗಟವೀರ ಸಮಾಜ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಜು.7- ಶ್ರೀ ತೊಗಟವೀರ ಸಮಾಜ ಸೇವಾ ಸಮಿತಿ ಟ್ರಸ್ಟ್ ವತಿಯಿಂದ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವ ತೊಗಟವೀರ ಸಮಾಜದ ಪ್ರತಿಭಾವಂತ ಎಸ್.ಎಸ್‌ಎಲ್.ಸಿಯಲ್ಲಿ ಶೇ.80, ಪಿ.ಯು.ಸಿಯಲ್ಲಿ ಶೇ.80 ಮತ್ತು ಪದವಿಯಲ್ಲಿ ಶೇ.75 ಅಂಕಗಳನ್ನು ಪಡೆದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ದಿನಾಂಕ 20.07.2022 ರೊಳಗಾಗಿ ವಿದ್ಯಾರ್ಥಿಗಳು ಅರ್ಜಿಯನ್ನು ಶ್ರೀ ತೊಗಟವೀರ ಸಮುದಾಯ ಭವನದಲ್ಲಿ ಸಲ್ಲಿಸಲು ಕೋರಲಾಗಿದೆ ಎಂದು ಕಾರ್ಯದರ್ಶಿ ತಿಳಿಸಿದ್ದಾರೆ.

## ಬೇಡ ಜಂಗಮ ರಕ್ಷಣಾ ವೇದಿಕೆ ಪ್ರತಿಭಟನೆ



ಜಗಳೂರು

ಜಗಳೂರು, ಜು. 7- ಸಂವಿಧಾನದ ಹಕ್ಕೊತ್ತಾಯಕ್ಕಾಗಿ ಆಗ್ರಹಿಸಿ ಅಖಿಲ ಕರ್ನಾಟಕ ಡಾ. ಬಿ.ಆರ್. ಅಂಬೇಡ್ಕರ್ ಬೇಡ ಜಂಗಮ ಪರಿಶಿಷ್ಟ ಜಾತಿ ರಕ್ಷಣಾ ವೇದಿಕೆ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ನೂರಾರು ಪ್ರತಿಭಟನಾಕಾರರು ಆಡಳಿತ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ತಾಲ್ಲೂಕು ಕಛೇರಿಗೆ ತೆರಳಿ ತಹಶೀಲ್ದಾರ್ ಮುಖಾಂತರ ಮನವಿ ಸಲ್ಲಿಸಿದರು. ಸಂಘಟನೆಯ ತಾಲ್ಲೂಕು ಅಧ್ಯಕ್ಷ ದೇವಿಕೆರೆ ಶಿವಕುಮಾರ ಸ್ವಾಮಿ, ಸಂಘಟನೆಯ ಕಾರ್ಯಾಧ್ಯಕ್ಷ ಸುರೇಶಯ್ಯ, ಕಾರ್ಯದರ್ಶಿ ನಂಜುಂಡಯ್ಯ, ಮುಖಂಡರಾದ ಪ್ರತಾಪಯ್ಯ, ನಾಗಭೂಷಣಯ್ಯ, ದಳಪತಿ ವೀರಯ್ಯ, ರಾಜು, ಶಿವಯ್ಯ, ಮಲ್ಲಿಕಾರ್ಜುನಯ್ಯ, ಮಲ್ಲಯ್ಯ, ಮಂಜಯ್ಯ, ಯೋಗೇಶ್ ಸೇರಿದಂತೆ ತಾಲ್ಲೂಕಿನ ವಿವಿಧ ಗ್ರಾಮಗಳ ಬೇಡ ಜಂಗಮ ಮುಖಂಡರುಗಳು ಭಾಗವಹಿಸಿದ್ದರು.

# ದೃಶ್ಯ ಮಾಧ್ಯಮ ಪ್ರಭಾವದಿಂದ ಗ್ರಾಮೀಣ ಕಲೆ ಕಣ್ಮರೆ: ವಿಷಾದ

ದಾವಣಗೆರೆ, ಜು. 7- ದೃಶ್ಯ ಮಾಧ್ಯಮ ಪ್ರಭಾವ, ಮೊಬೈಲ್ ಹಾವಳಿಯಿಂದಾಗಿ ಗ್ರಾಮೀಣ ಕಲೆ, ಸಂಸ್ಕೃತಿ, ನಾಟಕ ಮುಂತಾದ ಜಾನಪದ ಕಲೆಗಳು ಕಣ್ಮರೆಯಾಗುತ್ತಿವೆ ಎಂದು ಯರಗುಂಟೆ ಶ್ರೀ ಗುರು ಕರಿಸಿದ್ಧೇಶ್ವರ ಗದ್ದುಗೆ ಮಠದ ಶ್ರೀ ಪರಮೇಶ್ವರ ಸ್ವಾಮೀಜಿ ವಿಷಾದ ವ್ಯಕ್ತಪಡಿಸಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಬಯಲಾಟ (ದೊಡ್ಡಾಟ) ಪ್ರದರ್ಶನ ಮತ್ತು ಗ್ರಾಮೀಣ ಕಲಾವಿದರುಗಳಿಗೆ ಪ್ರಶಸ್ತಿ ಪ್ರದಾನ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಆಧುನಿಕತೆಯ ಭರಾಟೆಯಲ್ಲಿ ಗ್ರಾಮೀಣ ಜನಪದ ಕಲೆ, ಸಂಸ್ಕೃತಿ, ಕಣ್ಮರೆಯಾಗುತ್ತಿದ್ದು ಸಿನಿಮಾ, ಧಾರಾವಾಹಿ, ಡಿಜೆ ಸಂಗೀತ, ಸಾಮಾಜಿಕ ಜಾಲತಾಣಗಳ ಕಡೆ ಜನರು ಆಕರ್ಷಿತರಾಗುತ್ತಿದ್ದಾರೆ ಎಂದರು.

ನೋವನ್ನು ಮರೆಯಲು ಸಂಗೀತ ಬೇಕು. ಬಾಳಿಗೆ ಸಂಗಾತಿ ಬೇಕು. ಸಂಗೀತದಿಂದ ಮಾನಸಿಕ ನೆಮ್ಮದಿ ಸಾಧ್ಯ. ಗ್ರಾಮೀನ ಜನಪದ ಕಲೆ ಸಮಾಜದಲ್ಲಿ ಮಹತ್ತರ ಪಾತ್ರ ವಹಿಸುತ್ತಿದೆ. ಕಲಾವಿದರಿಗೆ ಬೆಲೆ ಕಟ್ಟಲಾಗದು. ಅಂತಹ ಗ್ರಾಮೀಣ ಕಲಾವಿದರನ್ನು ಗುರುತಿಸಿ ಗೌರವಿಸುತ್ತಿರುವ ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘದ ಸಂಸ್ಥಾಪಕ ಎನ್.ಎಸ್ ರಾಜು ಅವರ ಕಾರ್ಯ ಶ್ಲಾಘನೀಯ ಎಂದು ಹೇಳಿದರು.



'ಕರಿಬಂಟನ ಕಾಳಗ' ಬಯಲಾಟ ಪ್ರದರ್ಶನದ ದೃಶ್ಯ

ಚನ್ನಗಿರಿ ಹಿರೇಮಠದ ಶ್ರೀ ಕೇದಾರಲಿಂಗ ಶಿವಶಾಂತವೀರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಸೇವಾಭಾವನೆಯಿಂದ ಪರಮಾನಂದ ಕಂಡುಕೊಳ್ಳಲು ಸಾಧ್ಯವಿದೆ. ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿ, ಭವ್ಯ ಪರಂಪರೆಯನ್ನು ಹೊಂದಿದ ಶ್ರೀಮಂತ ದೇಶ ಭಾರತ. ಆದರೆ ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಜಾನಪದ, ನಾಟಕ ಕಲೆಗಳು ಮರೆಯಾಗುತ್ತಿವೆ ಎಂದು ವಿಷಾದಿಸಿದರು.

ಪುರಾಣ, ಪ್ರವಚನ, ಅಧ್ಯಾತ್ಮಿಕ ಚಿಂತನೆಗಳನ್ನು ಕೇಳುವಷ್ಟು ವ್ಯವಧಾನ ಜನರಲ್ಲಿ ಇಲ್ಲವಾಗಿದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಕೂಡಿ ಬಾಳುವ ಸಂಸ್ಕೃತಿ ಕೂಡ ಕಣ್ಮರೆಯಾಗುತ್ತಿದೆ ಎಂದರು.

ಸಾಹಿತಿ ಹೆಚ್.ಕೆ. ಸತ್ಯಭಾಮ ಕಾರ್ಯಕ್ರಮ ಉದ್ಘಾಟಿಸಿದರು. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಗೌರವ ಕಾರ್ಯದರ್ಶಿ ಬಿ. ದಿಳ್ಳೆಪ್ಪ, ಕದಳಿ ಮಹಿಳಾ ವೇದಿಕೆ ನಗರ ಘಟಕದ ಅಧ್ಯಕ್ಷೆ ವಿನೋದ ಅಜಗಣ್ಣನವರ್, ಅಧ್ಯಕ್ಷತೆ ವಹಿಸಿದ್ದ ಸಿರಿಗನ್ನಡ ವೇದಿಕೆ ನಗರ ಘಟಕದ ಅಧ್ಯಕ್ಷ ಎಂ. ಬಸವರಾಜ್ ಮಾತನಾಡಿದರು.

ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಬಿ.ಇ. ತಿಪ್ಪೇಸ್ವಾಮಿ ಪ್ರಾರ್ಥಿಸಿದರು. ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘದ ಅಧ್ಯಕ್ಷ ಎನ್.ಎಸ್. ರಾಜು ಸ್ವಾಗತಿಸಿದರು. ವಾಣಿ ನಿರೂಪಿಸಿದರು.

ಸಿದ್ಧಮ್ಮನಹಳ್ಳಿಯ ಶ್ರೀ ರಂಗನಾಥ ಸ್ವಾಮಿ ಯಕ್ಷಗಾನ ಬಯಲಾಟ ಸಂಘದ ಕಲಾವಿದರು 'ಕರಿಬಂಟನ ಕಾಳಗ' ಬಯಲಾಟ ಪ್ರದರ್ಶಿಸಿದರು.

# ರಂಗಕಲೆ ಸಮಾಜದ ಪರಿಣಾಮಕಾರಿ ಮಾಧ್ಯಮ

ದಾವಣಗೆರೆ, ಜು. 7- ನಾಟಕ, ಬೀದಿನಾಟಕ, ಸಂಗೀತ, ಚಿತ್ರಕಲೆಗಳು ಬದುಕಿನ ಭಾಗಗಳಾಗಿವೆ. ಸಮಾಜಕ್ಕೆ ತಿಳಿಸಬೇಕಾದ ವಿಚಾರಗಳನ್ನು ರಂಗಕಲೆ ಮೂಲಕ ಪರಿಣಾಮಕಾರಿಯಾಗಿ ತಲುಪಿಸಲು ಸಾಧ್ಯವಿದೆ ಎಂದು ಬಿಇಎ ಶಿಕ್ಷಣ ಮಹಾವಿದ್ಯಾಲಯದ ಆಡಳಿತಾಧಿಕಾರಿ ಪ್ರೊ.ವೈ. ವೃಷಭೇಂದ್ರಪ್ಪ ಹೇಳಿದರು.



ನಗರದ ನಿಜಲಿಂಗಪ್ಪ ಬಡಾವಣೆಯ ಬಿಇಎ ಶಿಕ್ಷಣ ಮಹಾವಿದ್ಯಾಲಯದಲ್ಲಿ ಐಕ್ಯೂಸಿಎಸಿ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ 'ಶಿಕ್ಷಣದಲ್ಲಿ ರಂಗಕಲೆ' ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು. ರಂಗಕಲೆ ಶಿಕ್ಷಣದ ಪ್ರಮುಖ ಅಂಶ ಕೂಡ ಆಗಿದ್ದು, ವಿದ್ಯಾರ್ಥಿಗಳಲ್ಲಿ ಅದು ಕಲಿಕೆಯ ಭಾಗವೂ ಆಗಬೇಕಾಗಿದೆ ಎಂದರು.

ಮಲ್ಲಾಡಿಹಳ್ಳಿಯ ರಾಘವೇಂದ್ರ ಶಿಕ್ಷಣ ಮಹಾವಿದ್ಯಾಲಯದ ಹಿರಿಯ ಉಪನ್ಯಾಸಕ ಎನ್. ಎಸ್. ರುದ್ರೇಶ್ ಮಾತನಾಡಿ, ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗುವ ರಾಷ್ಟ್ರೀಯ ಶಿಕ್ಷಣ ನೀತಿಯ ಅಡಿಯಲ್ಲಿ ಶಿಕ್ಷಣ ನೀಡಬೇಕಾಗಿದೆ ಎಂದು ಹೇಳಿದರು.

ಶಿಕ್ಷಕರಲ್ಲಿಯೂ ಅದಕ್ಕೆ ತಕ್ಕನಾದ ಕೌಶಲ್ಯ ಇರಬೇಕು. ಅಂತಹ ಕೌಶಲ್ಯಗಳಲ್ಲಿ ರಂಗಕಲೆಯೂ ಒಂದು. ರಂಗಕಲೆಯಲ್ಲಿ ನುರಿತ ಅಧ್ಯಾಪಕರು ವಿದ್ಯಾರ್ಥಿಗಳನ್ನು ಬೌದ್ಧಿಕವಾಗಿ ಮತ್ತು ಮಾನಸಿಕವಾಗಿ ಗಟ್ಟಿಗೊಳಿಸಬಲ್ಲರು ಎಂದರು.

ಬಿಇಎ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ಎ.ಜೆ. ನೀತಾ ಅಧ್ಯಕ್ಷತೆ ವಹಿಸಿದ್ದರು. ಮಾಳೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಡಾ. ಸಾಸ್ವೆಹಳ್ಳಿ ಸತೀಶ್, ಸೋಮಿನಕೊಪ್ಪದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಅಣ್ಣಪ್ಪ ಒಂಟಮಾಳಗಿ ಸಂಪನ್ಮೂಲ ವ್ಯಕ್ತಿಗಳಾಗಿ ರಂಗ ತರಬೇತಿ ನೀಡಿದರು.

ಕಾಲೇಜಿನ ಬೋಧಕರಾದ ಡಾ. ಎಂ.ಸಿ. ಕೌಶಿಕ್, ಆರ್.ಸಿ. ಶೈಲಜಾ, ಡಾ. ಎನ್.ವಿ. ರಾಜೇಶ್, ಕೆ. ಮುರುಗೇಶ್, ಟಿ.ಎಸ್. ನಿಶಾಂತ್, ಚಂದ್ರೇಗೌಡ ಉಪಸ್ಥಿತರಿದ್ದರು. ವಿಜಯ ಪ್ರಾರ್ಥಿಸಿದರು. ಟಿ. ಪಾಂಡುರಂಗ ಸ್ವಾಗತಿಸಿದರು. ಧನಲಕ್ಷ್ಮಿ ವಂದಿಸಿದರು. ರಶ್ಮಿ ಕಾರ್ಯಕ್ರಮ ನಿರೂಪಿಸಿದರು.

# ಜಾಗತಿಕ ತಾಪಮಾನ ತಗ್ಗಿಸಲು ಪರಿಸರ ಸಂರಕ್ಷಣೆ ಅತ್ಯಗತ್ಯ



ಹರಪನಹಳ್ಳಿಯ ಉಪ ವಿಭಾಗಾಧಿಕಾರಿ ಎಚ್ .ಜಿ. ಚಂದ್ರಶೇಖರಯ್ಯ

ಹರಪನಹಳ್ಳಿ, ಜು.7- ದಿನದಿಂದ ದಿನಕ್ಕೆ ಜಾಗತಿಕ ತಾಪಮಾನ ಹೆಚ್ಚಾಗುತ್ತಿದ್ದು, ಪರಿಸರ ಸಂರಕ್ಷಣೆ ಅತ್ಯಗತ್ಯವಾಗಿದೆ ಎಂದು ಉಪ ವಿಭಾಗಾಧಿಕಾರಿ ಎಚ್ .ಜಿ. ಚಂದ್ರಶೇಖರಯ್ಯ ಹೇಳಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮೈದಾನದಲ್ಲಿ ಅರಣ್ಯ ಇಲಾಖೆ ಆಯೋಜಿಸಿದ್ದ ವನಮಹೋತ್ಸವ ಕಾರ್ಯಕ್ರಮದಲ್ಲಿ ಸಸಿ ನೆಡುವುದರ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ನಗರ ಪ್ರದೇಶದಲ್ಲಿ ಕಲುಷಿತ ವಾತಾವರಣ ವಿದ್ದು, ಗಿಡಗಳನ್ನು ಹೆಚ್ಚು ನೆಡುವ ಮೂಲಕ ವನಮಹೋತ್ಸವವನ್ನು ಅರ್ಥಪೂರ್ಣ ಗೊಳಿಸಬೇಕಿದೆ ಎಂದರು.

ದಾವಣಗೆರೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಎನ್.ಎಚ್.ಜಗನ್ನಾಥ ಮಾತನಾಡಿ ಮಣ್ಣು, ನೀರು, ಸಸಿ ಇವುಗಳ ಮಹತ್ವ ನಾವೆಲ್ಲರೂ ಅರಿಯಬೇಕಿದೆ, ಬೀಜ ಬಿತ್ತನೆ ಕಾರ್ಯ ಮಾಡಬೇಕು, ಹರಪನಹಳ್ಳಿ ತಾಲ್ಲೂಕಿನಲ್ಲಿ ಅರಣ್ಯ ವಿಸ್ತೀರ್ಣ ಹೆಚ್ಚಿದೆ , ಹೆಚ್ಚು ಸಸಿಗಳನ್ನು ನೆಟ್ಟು ಪರಿಸರ ಕಾಪಾಡಬೇಕಿದೆ ಎಂದು ಹೇಳಿದರು.

ಪುರಸಭೆ ವತಿಯಿಂದ 1200 ಸಸಿಗಳನ್ನು ಪಟ್ಟಣ ವ್ಯಾಪ್ತಿಯಲ್ಲಿ ನೆಡಲು ನೀಡಲಾಗಿದೆ ಎಂದು ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ ತಿಳಿಸಿದರು.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮೋಹನಕುಮಾರ, ವಲಯ ಅರಣ್ಯಾಧಿಕಾರಿ ಮಲ್ಲಪ್ಪ, ಸಾಮಾಜಿಕ ಆರ್ ಎಫ್ ಓ ತೋಷನ್ ಕುಮಾರ್, ತಹಶೀಲ್ದಾರ್ ಶಿವಕುಮಾರ ಬಿರಾದಾರ, ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜಪ್ಪ, ದೈಹಿಕ ಪರಿವೀಕ್ಷಕ ರೇವಣ್ಣ, ಉಪ ಪ್ರಾಚಾರ್ಯ ಬೆನಕಪ್ಪ, ಹಾಗು ಇತರರು ಹಾಜರಿದ್ದರು.

## ನಗರದಲ್ಲಿ ಇಂದು ರೈತರಿಗೆ ಪಶುಸಂಗೋಪನಾ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ರೈತರಿಗೆ ಪಶುಸಂಗೋಪನಾ ಚಟುವಟಿಕೆ ಕುರಿತು ತರಬೇತಿ ಶಿಬಿರ ನಡೆಯಲಿದೆ. ಇಂದು ಕುರಿ ಮತ್ತು ಮೇಕೆ ಸಾಕಾಣಿಕೆ ಬಗ್ಗೆ ತರಬೇತಿ ನೀಡುವ ಗುರಿ ಹೊಂದಲಾಗಿದೆ.ವಿವರಕ್ಕೆ ಪಶುವೈದ್ಯಕೀಯ ಸಹಾಯಕರ ತರಬೇತಿ ಕೇಂದ್ರ (ದೂರವಾಣಿ 08192-233787) ವನ್ನು ಸಂಪರ್ಕಿಸಬಹುದು.

## ಜುಲೈ ತಿಂಗಳ ಭವಿಷ್ಯ ನಿಧಿ ಅದಾಲತ್

ದಾವಣಗೆರೆ, ಜು.7 - ಇದೇ ದಿನಾಂಕ 11 ರಂದು ಶಿವಮೊಗ್ಗದ ಮಲ್ಲಿಗೇನಹಳ್ಳಿಯ ಭವಿಷ್ಯ ನಿಧಿ ಕಚೇರಿಯಲ್ಲಿ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರು ಇ.ಪಿ.ಎಫ್/ಇ.ಪಿ.ಎಸ್ ಸದಸ್ಯರಿಗಾಗಿ ಭವಿಷ್ಯ ನಿಧಿ ಅದಾಲತ್ತನ್ನು ನಡೆಸಲಿದ್ದಾರೆ. ಉದ್ಯೋಗದಾತರು ಮತ್ತು ಟ್ರೇಡ್ ಯೂನಿಯನ್, ಸದಸ್ಯರು, ಪಿಂಚಣಿದಾರರು, ಅದಾಲತ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.

ಚಂದಾದಾರರು, ಪಿ.ಎಫ್ ಸದಸ್ಯರು, ಪಿಂಚಣಿದಾರರು ಇದೇ ದಿನಾಂಕ 11ರಂದು ಬೆಳಿಗ್ಗೆ ಬೆಳಿಗ್ಗೆ 11 ರಿಂದ 12 ರವರೆಗೆ ಹಾಗೂ ಉದ್ಯೋಗದಾತರು ಮಧ್ಯಾಹ್ನ 12 ರಿಂದ 01 ರವರೆಗೆ ಅದಾಲತ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.

ಪಿ.ಎಫ್. ಸದಸ್ಯರು, ಪಿಂಚಣಿದಾರರು, ಟ್ರೇಡ್ ಯೂನಿಯನ್ ಮತ್ತು ಉದ್ಯೋಗದಾತರು ಕುಂದು ಕೊರತೆಯ ವಿವರಗಳನ್ನು ನಾಳೆ ದಿನಾಂಕ 8 ರೊಳಗೆ ಇಮೇಲ್ ro.shivamogga@epfindia.gov.in ಗೆ ಪಿ.ಎಫ್ ಅಕೌಂಟ್ ಸಂಖ್ಯೆ, ಪಿಂಚಣಿ ಸಂಖ್ಯೆ, ಸಂಸ್ಥೆಯ ಕೋಡ್ ನಂಬರ್, ಹೆಸರು ಮೊಬೈಲ್ ಸಂಖ್ಯೆ ಮತ್ತು ಇಮೇಲ್ ಐಡಿಯೊಂದಿಗೆ ಮುಂಚಿತವಾಗಿ ಒದಗಿಸುವಂತೆ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರು ತಿಳಿಸಿದ್ದಾರೆ.

## ಲಂಚ ಪ್ರಕರಣ : ಪವರ್ ಗ್ರಿಡ್, ಟಾಟಾ ಪ್ರಾಜೆಕ್ಟ್ಸ್ ಅಧಿಕಾರಿಗಳ ಬಂಧನ

ನವದೆಹಲಿ, ಜು. 7 – ಲಂಚ ಪ್ರಕರಣಕ್ಕೆ ಸಂಬಂಧಿಸಿದಂತೆ ಪವರ್ ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾದ ಕಾರ್ಯಕಾರಿ ನಿರ್ದೇಶಕ ಬಿ.ಎಸ್. ಝಾ ಹಾಗೂ ಟಾಟಾ ಪ್ರಾಜೆಕ್ಟ್ಸ್‌ನ ಐವರು ಅಧಿಕಾರಿಗಳನ್ನು ಬಂಧಿಸಲಾಗಿದೆ ಎಂದು ಸಿ.ಬಿ.ಐ. ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಕರಣದ ಬಗ್ಗೆ ಘಾಜಿಯಾಬಾದ್, ನೋಯ್ಡಾ, ಗುರು ಗ್ರಾಮ್ ಮತ್ತಿತರೆ ಕಡೆಗಳಲ್ಲಿ ದಾಳಿ ನಡೆಸಲಾಗಿದೆ. ಗುರುಗ್ರಾಮದಲ್ಲಿರುವ ಝಾ ನಿವಾಸದಿಂದ 93. ಲಕ್ಷ ರೂ. ನಗದು ವಶಪಡಿಸಿಕೊಳ್ಳಲಾಗಿದೆ.

ಟಾಟಾ ಪ್ರಾಜೆಕ್ಟ್ಸ್‌ಗೆ ನೆರವು ನೀಡಲು ಝಾ ಲಂಚ ಪಡೆದಿದ್ದಾಗಿ ಆರೋಪಿಸಲಾಗಿದೆ. ಝಾ ಮೇಲೆ ಮೊದಲೇ ನಿಗಾ ವಹಿಸಲಾಗಿತ್ತು. ಲಂಚ ನೀಡುವ ಯತ್ನ ನಡೆಸುತ್ತಿದ್ದಾಗ ದಾಳಿ ನಡೆಸಿ ಬಂಧಿಸಲಾಗಿದೆ.

## ನಂದಿಗಾವಿ ಗ್ರಾ.ಪಂ. ಅಧ್ಯಕ್ಷರಾಗಿ ಕವಿತ ಹೂಗಾರ್



ಮಲೇಬೆನ್ನೂರು, ಜು.7- ನಂದಿಗಾವಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಶ್ರೀಮತಿ ಕವಿತ ಟಿ.ಆರ್. ಹೂಗಾರ್ ಅವರು ಗುರುವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಿ ಡಬ್ಲ್ಯೂ ಡಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರ ಶಿವಮೂರ್ತಿ ಇವರು ಚುನಾವಣಾಧಿಕಾರಿಯಾಗಿದ್ದರು. ಶ್ರೀಮತಿ ಶಾರದಮ್ಮ ಚೌಡಪ್ಪ ಇವರ ರಾಜೀನಾಮೆಯಿಂದಾಗಿ ಅಧ್ಯಕ್ಷ ಸ್ಥಾನ ತೆರವಾಗಿತ್ತು. ಗ್ರಾಮ ಪಂಚಾಯತಿ ವ್ಯಾಪ್ತಿಯ ನಂದಿಗಾವಿ, ಧೂಳೆಹೊಳೆ, ಬಿಳಸನೂರು, ಹೊಸಹಳ್ಳಿ ಗ್ರಾಮಗಳ 13 ಸದಸ್ಯರ ಪೈಕಿ ಎ. ಎನ್. ರಾಜಣ್ಣ, ಹನುಮಂತರೆಡ್ಡಿ, ಮಹಾಂತೇಶ, ಕವಿತಾ ನಾಗರಾಜ್, ಚನ್ನಯ್ಯ ಜಿ.ಎಂ., ಗೀತಮ್ಮ, ಶಿಲ್ಪ, ರಾಜೇಶ್ವರಿ , ರಾಮಪ್ಪ, ರಶ್ಮಿ ಅಜ್ಜಣ್ಣ ಹಾಜರಿದ್ದರು. ಬಿಳಸನೂರಿನ ನಂದ್ಯಪ್ಪ ಗೈರು ಹಾಜರಾಗಿದ್ದರು.

## ಹೊನ್ನಾಳಿ-ನ್ಯಾಮತಿ : ಬಿಸಿಯೂಟ ತಯಾರಕರ ಮನವಿ



ಹೊನ್ನಾಳಿ, ಜು. 7- ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕುಗಳ ಬಿಸಿಯೂಟ ತಯಾರಕರು ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರಕ್ಕೆ ಒತ್ತಾಯಿಸಿ ಮುಖ್ಯಮಂತ್ರಿಗಳಿಗೆ, ಶಿಕ್ಷಣ ಮಂತ್ರಿಗಳಿಗೆ ಹೊನ್ನಾಳಿ ತಹಸೀಲ್ದಾರ್ ಮೂಲಕ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಘಟನೆಯ ಜಿಲ್ಲಾಧ್ಯಕ್ಷ ಆವರಗೆರೆ ಚಂದ್ರು ಈಗಾಗಲೇ 60 ವರ್ಷ ಆಗಿ ಕೆಲಸದಿಂದ ಬಿಡುಗಡೆಗೊಳಿಸಿರುವ ಎಲ್ಲಾ ಬಿಸಿಯೂಟ ತಯಾರಕರಿಗೆ ನಿವೃತ್ತಿ ಪೆನ್ಷನ್ ಇಡುಗಂಟು ಹಣ ಕೊಡಬೇಕು ಹಾಗೂ ಇತರೆ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಪ್ರತಿಭಟನೆ ನೇತೃತ್ವವನ್ನು ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕು ಬಿಸಿಯೂಟ ತಯಾರಕ ಮುಖಂಡರುಗಳಾದ ಹೊನ್ನಾಳಿ ಲಲಿತಮ್ಮ, ಬಿದರಗಡ್ಡೆ ಹಾಲಮ್ಮ, ನ್ಯಾಮತಿ ಜಯಮ್ಮ, ರಾಧಮ್ಮ ಸೇರಿದಂತೆ ಇತರರು ವಹಿಸಿದ್ದರು.

## ನಗರದ ಶ್ರೀಶೈಲ ಮಠದಲ್ಲಿ ಇಂದು ಸಭೆ

ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರ ದ್ವಾದಶ ಪೀಠಾರೋಹಣ ಮಹೋತ್ಸವ ಹಾಗೂ ಜನ್ಮ ಸುವರ್ಣ ಮಹೋತ್ಸವದ ನಿಮಿತ್ತ ಅಕ್ಟೋಬರ್ 29 ರಿಂದ ಜ.15, 2023 ರವರೆಗೆ ನಡೆಯಲಿರುವ ವಿವಿಧ ಧಾರ್ಮಿಕ, ಸಾಮಾಜಿಕ ಹಾಗೂ ಜನಜಾಗೃತಿ ಪಾದಯಾತ್ರಾ ಕಾರ್ಯಕ್ರಮಗಳ ಪೂರ್ವಭಾವಿ ಸಭೆ ಇಂದು ಸಂಜೆ 4 ಗಂಟೆಗೆ ಶ್ರೀಶೈಲ ಮಠದಲ್ಲಿ ನಡೆಯಲಿದೆ ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು. ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ ಮತ್ತಿತರೆ ಗಣ್ಯರು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

# ಆಷಾಢ ಮಾಸದಲ್ಲಿ ಮದುವೆ ಆಗುತ್ತಿರುವುದು ಬಸವಾದಿ ಶರಣರಿಗೆ ಸಲ್ಲುವ ಗೌರವ



ಸಾಮೂಹಿಕ ಕಲ್ಯಾಣ ಮಹೋತ್ಸವದಲ್ಲಿ ಬಸವಪ್ರಭು ಸ್ವಾಮೀಜಿ

ಚಿತ್ರದುರ್ಗ, ಜು. 7- ಆಷಾಢ ಅಶುಭವಲ್ಲ ಎನ್ನುವುದಕ್ಕೆ ಸಾಮೂಹಿಕ ಕಲ್ಯಾಣ ಕಾರ್ಯಕ್ರಮ ಸಾಕ್ಷಿಯಾಗಿದೆ. ಯಾವ ಮಾಸಗಳೂ ಕನಿಷ್ಠವಲ್ಲ ಎಲ್ಲವೂ ಶ್ರೇಷ್ಠ. ಆಷಾಢ ಮಾಸದಲ್ಲಿ ಇಷ್ಟೊಂದು ಮದುವೆ ಆಗುತ್ತಿರುವುದು ಬಸವಾದಿ ಶರಣರಿಗೆ ಸಲ್ಲುವ ಗೌರವವಾಗಿದೆ ಎಂದು ಶ್ರೀ ಬಸವಪ್ರಭು ಸ್ವಾಮಿಗಳು ನುಡಿದರು.

ನಗರದ ಬಸವಕೇಂದ್ರ, ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದಲ್ಲಿ ಎಸ್.ಜೆ. ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ (ಚಿತ್ರದುರ್ಗ) ಇವರ ಸಹಯೋಗದಲ್ಲಿ ನಡೆದ ಮೂವತ್ತೆರಡನೇ ವರ್ಷದ ಏಳನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವ ಕಾರ್ಯಕ್ರಮದ ಸಮ್ಮುಖ ವಹಿಸಿ, ಶ್ರೀಗಳು ಮಾತನಾಡಿದರು.

ಸಂಸಾರ ಜೀವನ ಯಶಸ್ವಿಯಾಗಲು ಸತಿ-ಪತಿಗಳು ಹೊಂದಿಕೊಡು ಹೋಗಬೇಕು. ಸತಿ-ಪತಿಗಳದು ಎರಡು ಹೃದಯಗಳ ಸಂಬಂಧ. ಸ್ನೇಹಿತರಂತೆ ಇರಬೇಕು. ಹೆಂಡತಿ ತನ್ನ ಸೇವಕಿ ಎನ್ನುವ ಭಾವನೆ ಇರಬಾರದು. ಎಲ್ಲರೂ ಸಮಾನರು. ಸಾಮರಸ್ಯದ ಬದುಕು ನಮ್ಮದಾಗಬೇಕು. ಅತ್ತೆ-ಸೊಸೆ ಸಂಬಂಧ ತಾಯಿ-ಮಗಳಂತೆ ಇರಬೇಕು. ಆಗ ಮಾತ್ರ ಸಂಸಾರ ಸಸಾರವಾಗುತ್ತದೆ. ಸದ್ಗತಿ ಹೊಂದಲು ಸಾಧ್ಯವಾಗುತ್ತದೆ. ಮುರುಘಾ ಶರಣರ ಯೋಜನೆಗಳು ಇತಿಹಾಸವಾಗಿವೆ. ಸರಳ ಸಾಮೂಹಿಕ ಕಲ್ಯಾಣ ಕಾರ್ಯಕ್ರಮ ಬಡವರಿಗಾಗಿ ಮಾಡಿರುವ ಯೋಜನೆಯಾಗಿದ್ದು, ಮೂವತ್ತೆರಡು ವರ್ಷ ಪೂರೈಸಿ ನಿರಂತರವಾಗಿ ಮುನ್ನಡೆದಿದೆ. ಇದು ಇತಿಹಾಸದಲ್ಲಿ ದಾಖಲಾಗುವಂಥದ್ದು.

ಮುಖ್ಯಅತಿಥಿ ಶಿಕ್ಷಣಾಧಿಕಾರಿ ವಿ. ತಿಪ್ಪೇಸ್ವಾಮಿ ಮಾತನಾಡಿ, ಶ್ರೀಮಠವು ಅನೇಕ ರೀತಿಯ ಪರಿವರ್ತನಾಪರ ಕಾರ್ಯಗಳನ್ನು ಮಾಡುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಆದಿಕರ್ನಾಟಕ-07, ನಾಯಕ-03 ಮತ್ತು ಮಡಿವಾಳ, ನೇಕಾರ, ಲಿಂಗಾಯತ, ಕುರುಬ ತಲಾ ಒಂದು ಹಾಗು ಪದ್ಮಶಾಲಿ (ವರ) - ನಾಯಕ (ವಧು) ಅಂತರ್ಜಾತಿ ವಿವಾಹ ಸೇರಿದಂತೆ ಒಟ್ಟು 15 ಜೋಡಿಗಳ ವಿವಾಹ ನೆರವೇರಿತು.

ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎಸ್.ಕೆ. ಬಸವರಾಜನ್, ಜಂಟಿ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ, ಆಡಳಿತ ಮಂಡಳಿ ಸದಸ್ಯ ಕೆಇಬಿ ಷಣ್ಮುಖಪ್ಪ, ಪೈಲ್ವಾನ್ ತಿಪ್ಪೇಸ್ವಾಮಿ, ಎನ್.ತಿಪ್ಪಣ್ಣ ಮೊದಲಾದವರಿದ್ದರು.

ಚಿನ್ಮಯದೇವರು ಸ್ವಾಗತಿಸಿದರು. ಪ್ರಕಾಶ ದೇವರು ನಿರೂಪಿಸಿದರು.


ತಕ್ಷಣ ಬೇಕಾಗಿದ್ದಾರೆ

ಡಿಪ್ಲೋಮಾ ಸಿವಿಲ್ - 01
ಆಫೀಸ್ ಸೂಪರ್‌ವೈಸರ್ - 01

ಫೋನ್ : 98448 60466


ಹುಟ್ಟುಹಬ್ಬದ ಶುಭಾಶಯಗಳು

ಇಂದು ತಮ್ಮ ಸಾರ್ಥಕ ಜೀವನದ 42 ವಸಂತಗಳನ್ನು ಪೂರೈಸಿ, 43ನೇ ವಸಂತಕ್ಕೆ ಪಾದಾರ್ಪಣೆ ಮಾಡುತ್ತಿರುವ ದಾವಣಗೆರೆ ಜಿಲ್ಲಾ ವಕೀಲರ ಸಂಘದ ಕಾರ್ಯದರ್ಶಿಗಳೂ ಆದ

ಶ್ರೀ ಲೋಕಿಕೆರೆ ಹೆಚ್. ಪ್ರದೀಪ್

ಅವರಿಗೆ ಜನ್ಮ ದಿನದ ಶುಭಾಶಯಗಳು.

ಶುಭ ಕೋರುವವರು :
ಜಿಲ್ಲಾ ವಕೀಲರ ಸಂಘ (ರಿ.)
ಜಿಲ್ಲಾ ಕಾಂಗ್ರೆಸ್ ಕಾನೂನು ಘಟಕ
ಬೀರೇಶ್ವರ ವಿದ್ಯಾವರ್ಧಕ ಸಂಘ (ರಿ.)
ಶ್ರೀ ಶೈಲ ಮಠ ಕಾಂಪ್ಲೆಕ್ಸ್ ವಕೀಲ ಮಿತ್ರರು
ದಾವಣಗೆರೆ ಹಾಗೂ ಸ್ನೇಹಿತರು,
ಹಿತೈಷಿಗಳು, ಬಂಧು-ಮಿತ್ರರು
ಮತ್ತು ಲೋಕಿಕೆರೆ ಗ್ರಾಮಸ್ಥರು.

ಹುಟ್ಟುಹಬ್ಬದ ಶುಭಾಶಯಗಳು



ಜಿಲ್ಲಾ ವಾಲ್ಮೀಕಿ ನಾಯಕ ಯುವ ಘಟಕದ ಗೌರವಾಧ್ಯಕ್ಷರೂ, ನಮ್ಮ ಆತ್ಮೀಯರೂ ಆದ

ಶ್ರೀ ಪ್ರಶಾಂತ್ ಹೆಚ್.ವಿ (ಪಚ್ಚಿ)

ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು. ಶ್ರೀಯುತರಿಗೆ ಭಗವಂತನು ಆಯುರಾರೋಗ್ಯ ಭಾಗ್ಯ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

✦ ಶ್ರೀನಿವಾಸ ದಾಸಕರಿಯಪ್ಪ ಗೆಳೆಯರ ಬಳಗ
✦ ಹ್ಯಾಪಿ ಫ್ರೆಂಡ್ಸ್ ಗ್ರೂಪ್, ವಿನೋಬನಗರ
✦ ಇಂಡಿಯನ್ ಕಾಫಿ ಬಾರ್ ಗೆಳೆಯರ ಬಳಗ, ಹಳೇ ಬಸ್ ನಿಲ್ದಾಣ
✦ ಟೀ ಲಾಂಜ್ ಗೆಳೆಯರ ಬಳಗ, ದಾವಣಗೆರೆ

# ಹರಪನಹಳ್ಳಿ : ಕುಂ.ಬಾ. ಸದಾಶಿವಪ್ಪ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ ಶ್ರದ್ಧಾಂಜಲಿ



ಹರಪನಹಳ್ಳಿ, ಜು. 7 - ಇತ್ತೀಚಿಗೆ ನಿಧನರಾದ ತಾಲ್ಲೂಕಿನ ಹಿರಿಯ ಸಾಹಿತಿ, ಸಂಶೋಧಕ ಕುಂ.ಬಾ.ಸದಾಶಿವಪ್ಪವರಿಗೆ ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಘಟಕದ ವತಿಯಿಂದ ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ನಿನ್ನೆ ಶ್ರದ್ಧಾಂಜಲಿ ಸಭೆ ಏರ್ಪಡಿಸಲಾಗಿತ್ತು.

ಈ ವೇಳೆ ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಘಟಕದ ನಿಕಟ ಪೂರ್ವ ಅಧ್ಯಕ್ಷ ಡಿ. ರಾಮನಮಲಿ ಮಾತನಾಡಿ, ಸಾಹಿತ್ಯ ಕೃಷಿ ಮಾಡುತ್ತಾ ಬೀಚಿಯವರ ನಂತರ 60 ಕತೆ, ಕವನ ಕೃತಿಗಳನ್ನು ಬರೆದಿದ್ದಾರೆ. ಸಂಶೋಧಕರಾಗಿ ಕುಂಬಾಸರವರು ಬಗಲಲ್ಲಿ ಚೀಲ ಹಾಕಿಕೊಂಡು ಓಡಾಡುತ್ತಿದ್ದರು. ಅವರು ಮಾಡಿರುವ ಸಾಧನೆಗೆ ಇನ್ನು ಅನೇಕ ಪ್ರಶಸ್ತಿಗಳು ಸಿಗಬೇಕಿತ್ತು ಎಂದರು.

ಹಗರಿಬೊಮ್ಮನಹಳ್ಳಿಯ ಸಾಹಿತಿ ಮೇಟಿ ಕೊಟ್ರಪ್ಪ ಮಾತನಾಡಿ, ಕುಂಬಾಸರವರು ಸರಳ ಜೀವನ ಮಾಡುವವರಾಗಿದ್ದು, ಪುಸ್ತಕ ಪ್ರೀತಿ ಪುಸ್ತಕ ಪ್ರೇಮಿಯಾಗಿ ಕೆಲಸ ಮಾಡಿದರು. ಇಂಗ್ಲಿಷ್ ಪುಸ್ತಕಗಳನ್ನು ಬರೆದು ಪಠ್ಯ ಪುಸ್ತಕ ಸಮಿತಿಯ ಸದಸ್ಯರಾಗಿದ್ದರು ಎಂದರು.

ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಕೆ.ಉಚ್ಚಂಗೆಪ್ಪ ಮಾತನಾಡಿ, ಕುಂ. ಬಾ.ಸ ಎಂದೇ ಖ್ಯಾತರಾಗಿದ್ದ ಸದಾಶಿವಪ್ಪನವರು ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ, ಹರಪನಹಳ್ಳಿ ತಾಲ್ಲೂಕಿನ ಪರಿಚಯ, ಹರಪನಹಳ್ಳಿ ಪಾಳೇಗಾರರು, ಕರುನಾಡಿಗೆ ಜೈನರ ಕೊಡುಗೆ ಸೇರಿದಂತೆ 60ಕ್ಕೂ ಹೆಚ್ಚು ಪುಸ್ತಕಗಳನ್ನು ರಚಿಸಿದ್ದಾರೆ. ಇತಿಹಾಸ ಅಕಾಡೆಮಿ ಸಮ್ಮೇಳನದಲ್ಲಿ ಅನೇಕ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದ್ದಾರೆ. ಬಳ್ಳಾರಿ ಜಿಲ್ಲಾ ಕಸಾಪ ಅಧ್ಯಕ್ಷರಾಗಿ, ಹರಪನಹಳ್ಳಿ ತಾಲ್ಲೂಕು ಕಸಾಪ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಇಸ್ಮಾಯಿಲ್ ಎಲಿಗಾರ್ ಮಾತನಾಡಿ, ಇತಿಹಾಸ, ಹಾಸ್ಯಪ್ರಜ್ಞೆ ಇತ್ತು ಸದಾ ಕ್ರಿಯಾ ಶೀಲ ರಾಗಿದ್ದು ಹಿತ್ತಲುಗಿಡ ಮದ್ದಲ್ಲ ಎನ್ನುವ ಹಾಗೆ ರಾಜ್ಯೋತ್ಸವ ಪ್ರಶಸ್ತಿ ಗೆ ಅರ್ಹರು. ನಾವು ಹತ್ತಿರ ಇದ್ದರೂ ಅವರಿಂದ ದೂರವಿದ್ದು ತಪ್ಪು ಮಾಡಿದೆವು ಸಾಹಿತ್ಯ ಅಪಾಯದಲ್ಲಿದ್ದು ಸಾಹಿತ್ಯಿಕ ಸಂಘರ್ಷಗಳು ಜರುಗುತ್ತಿದ್ದು, ಸಂಶೋಧನೆ ಬಗ್ಗೆ ಇದ್ದ ಕಾಳಜಿ ಅಪಾರವಾಗಿತ್ತು ಇವತ್ತಿನ ರಾಜಕಾರಣದಿಂದ ಅವರಿಗೆ ಸಿಗಬೇಕಾದ ಪ್ರಶಸ್ತಿ ಗಳು ಸಿಗಲಿಲ್ಲ ಎನ್ನುವ ನೋವು ನನಗೆ ಕಾಡುತ್ತಿದೆ ಎಂದರು. ರಾಜ್ಯಕ್ಕೆ ಮತ್ತೆ ಅವರ ಪುಸ್ತಕ ಗಳು ಮರು ಮುದ್ರಣವಾಗಿ ಈ ನೆಲದ ಇತಿಹಾಸ ಸಿಗಲಿ ಎಂದರು.

ಸಂಪ್ರದಾಯ ಟ್ರಸ್ಟ್‌ನ ಮುಖ್ಯಸ್ಥ ಬಿ.ಪರುಶುರಾಮಪ್ಪ, ನಿವೃತ್ತ ಶಿಕ್ಷಕ ಗಣೇಶಪ್ಪ ಹಾಗೂ ಹೇಮಣ್ಣ ಮೋರಿಗೇರಿ ಮಾತನಾಡಿ, ಶೋಷಿತ ಸಮುದಾಯದಲ್ಲಿ ಜನಿಸಿ ಪ್ರಸ್ತುತ ಸಮಾಜದಲ್ಲಿರುವ ಅಂಕು ಡೊಂಕುಗಳನ್ನು ತಿದ್ದಲು ಶ್ರಮಿಸಿದರು ಎಂದು ಹೇಳಿದರು.

ವಿಜಯನಗರ ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಸ್. ಬಸವರಾಜ, ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕುಘಟಕದಕಾರ್ಯದರ್ಶಿಗಳಾದ ಪದ್ಮರಾಜ ಜೈನ್, ಜಿ.ಮಹಾದೇವಪ್ಪ, ವಾರ್ಡನ್ ಜುಂಜಪ್ಪ, ಪದಾಧಿಕಾರಿ ಗಳಾದ ಪಿ.ಕರಿಬಸಪ್ಪ. ಮಂಜಾನಾಯ್ಕ. ಸಿ.ಪ್ರತಾಪ್ ಸೇರಿದಂತೆ ಇತರರು ಇದ್ದರು.

# ಕಾರ್ಮಿಕರ ಬೇಡಿಕೆ ಈಡೇರಿಸಲು ಎಐಟಿಯುಸಿ ಆಗ್ರಹ




ಜಗಳೂರು, ಜು. 7 - ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರವನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಲು ಒತ್ತಾಯಿಸಿ, ಎಐಟಿಯುಸಿ ನೇತೃತ್ವದಲ್ಲಿ ಕಟ್ಟಡ ಕಾರ್ಮಿಕರು ತಹಶೀಲ್ದಾರ್ ಜಿ. ಸಂತೋಷ್‌ಕುಮಾರ್ ಅವರ ಮುಖಾಂತರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಪಟ್ಟಣದ ತಾಲ್ಲೂಕು ಕಛೇರಿ ಮುಂಭಾಗ ಜಮಾಯಿಸಿದ್ದ ಎಐಟಿಯುಸಿ ಪದಾಧಿಕಾರಿಗಳು ಆಡಳಿತ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಎಐಟಿಯುಸಿ ತಾಲ್ಲೂಕು ಗೌರವ ಅಧ್ಯಕ್ಷ ಮಹ್ಮದ್ ಭಾಷಾ ಮಾತನಾಡಿ, ಕಳೆದ ಎರಡು ವರ್ಷಗಳಿಂದ ಕೋವಿಡ್ ಪರಿಹಾರದ ನೆಪದಲ್ಲಿ ನೂರಾರು ಕೋಟಿ ಭರಿಸಿ, ಕಳಪೆ ಆಹಾರ ಸಾಮಗ್ರಿ ಖರೀದಿ, ನಿರ್ಮಾಣ ಕಾರ್ಮಿಕರಿಗೆ ವಂಚನೆ ಮಾಡಿರುವ ಕೆಲ ಭ್ರಷ್ಟ ಅಧಿಕಾರಿಗಳು ಹಾಗೂ ಭ್ರಷ್ಟ ರಾಜಕಾರಣಿಗಳ ಮೇಲೆ ನ್ಯಾಯಾಂಗ ತನಿಖೆ ಮಾಡಿ ಕಾನೂನು ರೀತಿ ಶಿಕ್ಷೆಗೊಳಪಡಿಸಬೇಕು ಎಂದು ಒತ್ತಾಯಿಸಿದರು.

**ಜಗಳೂರು**

ಕಾರ್ಮಿಕರಿಗೆ ಮದುವೆ ಸಹಾಯ ಧನ, ಹೆರಿಗೆ ಭತ್ಯೆ, ವಿದ್ಯಾರ್ಥಿ ವೇತನ, ವಿವಿಧ ಸೌಲಭ್ಯಗಳ ಅರ್ಜಿಗಳನ್ನು ಸಲ್ಲಿಸಲು ಆನ್‌ಲೈನ್ ವ್ಯವಸ್ಥೆ ಸರಿಪಡಿಸಬೇಕು. ಕಾರ್ಮಿಕರ ಸ್ವಾಭಾವಿಕ ಸಾವಿಗೆ ರೂ. 5 ಲಕ್ಷ, ಅಪಘಾತ ಸಾವಿಗೆ 10 ಲಕ್ಷ ರೂ., ಕೋವಿಡ್ ಮಹಾಮಾರಿಗೆ ತುತ್ತಾಗಿ ಸಾವನ್ನಪ್ಪಿದವರಿಗೆ ರೂ. 2 ಲಕ್ಷ ಪರಿಹಾರ ಮಂಜೂರು ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರಧಾನ ಕಾರ್ಯದರ್ಶಿ ಮಾದಿಹಳ್ಳಿ ಮಂಜುನಾಥ್ ಮಾತನಾಡಿ, ನೂತನ ಕಾರ್ಮಿಕರ ಕಾಯ್ದೆ ಹಿಂಪಡೆದು ಹಿಂದಿನ ಕಾರ್ಮಿಕ ಕಾಯ್ದೆಗಳನ್ನು ಮುಂದುವರೆಸಬೇಕು. ಸೌಲಭ್ಯಕ್ಕಾಗಿ ನಕಲಿ ಕಾರ್ಮಿಕರ ಕಾರ್ಡ್ ಸೃಷ್ಟಿಸುವವರಿಗೆ ಕಡಿವಾಣ ಹಾಕಬೇಕು. ಅರ್ಹ ಬಡ ಕಾರ್ಮಿಕರಿಗೆ ಮಂಡಳಿಯ ಸೌಲಭ್ಯಗಳು ತಲುಪಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಎಐಟಿಯುಸಿ ತಾಲ್ಲೂಕು ಪದಾಧಿಕಾರಿಗಳಾದ ವೀರಣ್ಣ, ತಿಪ್ಪೇಸ್ವಾಮಿ, ಶಿವಮೂರ್ತಿ, ಏಕಾಂತಪ್ಪ, ನಾಗರಾಜ್, ಲೋಕೇಶ್, ಕರಿಬಸಪ್ಪ, ವೀರೇಶ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ವಾರ್ತಾ ಇಲಾಖೆ ಬಸವರಾಜ್‌ಗೆ ಸನ್ಮಾನ



ದಾವಣಗೆರೆ, ಜು.7- ಸಿ.ಜಿ.ಕೆ. ಬೀದಿರಂಗ ದಿನಾಚರಣೆ ಅಂಗವಾಗಿ ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘವು ನಗರದ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಸರ್ವೋತ್ತಮ ಸೇವಾ ಪ್ರಶಸ್ತಿ ಪುರಸ್ಕೃತರಾದ ವಾರ್ತಾ ಇಲಾಖೆಯ ಬಿ. ಎಸ್.ಬಸವರಾಜ್ ಹಾಗು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹೆಚ್.ಆರ್. ಲಕ್ಷ್ಮಿದೇವಿ ಅವರನ್ನು ಫಲ-ಪುಷ್ಪ ಹಾಗು ಶಾಲು ಹೊದಿಸಿ ವಿರಕ್ತಮಠದ ಪಾಂಡೋಮಟ್ಟಿಯ ಶ್ರೀ ಗುರು ಬಸವ ಮಹಾಸ್ವಾಮೀಜಿ ಆಶೀರ್ವದಿಸಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಕ.ಸಾ.ಪ. ಜಿಲ್ಲಾ ಅಧ್ಯಕ್ಷ ಬಿ.ವಾಮದೇವಪ್ಪ, ನಿಕಟ ಪೂರ್ವ ಕ.ಸಾ.ಪ. ಅಧ್ಯಕ್ಷ ಹೆಚ್.ಎಸ್. ಮಂಜುನಾಥ್ ಕುರ್ಕಿ, ಪ್ರೊ. ಎಚ್. ಚನ್ನಪ್ಪ, ಸ್ಫೂರ್ತಿ ಸೇವಾ ಸಂಸ್ಥೆಯ ರಾಜು ಹಾಗು ಸನ್ಮಾನಿತರುಗಳಾದ ಗ್ರಾಮೀಣ ಭಾಗದ ಕಲಾವಿದರಾದ ಮಾರ್ತಾಂಡಪ್ಪ ತತ್ವಪದ ಉಪಸ್ಥಿತರಿದ್ದರು.

# ಸ್ವಾಭಿಮಾನ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಜು. 7- ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಜಿಲ್ಲಾ ಘಟಕದ ವತಿಯಿಂದ ನಡೆದ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಸಮಾಜದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ಸ್ವಾಭಿಮಾನ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಶೇ.90 ಕ್ಕಿಂತ ಹೆಚ್ಚು ಅಂಕ ಗಳಿಸಿದ ಸಮಾಜದ ವಿದ್ಯಾರ್ಥಿಗಳು ಜಿಲ್ಲಾ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಕಛೇರಿ ನಂ : 477, 1ನೇ ಮಹಡಿ, ಚೇತನಾ ಹೋಟೆಲ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ ಇಲ್ಲಿರುವ ಕಛೇರಿಯಲ್ಲಿ ಅಥವಾ ಸಮಾಜದ ಅಂತರ್ಜಾಲವಾದ ವೆಬ್‌ಸೈಟ್ www.panchamasali.org ನಲ್ಲಿ ಅರ್ಜಿಯನ್ನು ಪಡೆದು, ಇದೇ ದಿನಾಂಕ 27 ರೊಳಗಾಗಿ ಸಲ್ಲಿಸಬೇಕು. ವಿವರಕ್ಕೆ ಸಂಪರ್ಕಿಸಿ : (08192) 222008.

# ಹಳಕಟ್ಟಿ ಜಯಂತಿ : ವೇಷಭೂಷಣ ಸ್ಪರ್ಧೆ



ದಾವಣಗೆರೆ, ಜು.7 - ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ಮತ್ತು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ವಚನ ಸಾಹಿತ್ಯ ಪರಿಷತ್ತು ಇವರ ಸಹಯೋಗದಲ್ಲಿ ವಚನ ಪಿತಾ ಮಹ ಫ.ಗು. ಹಳಕಟ್ಟಿಯವರ ಜಯಂತಿ ಪ್ರಯುಕ್ತ ಹಿರಿಯರ ಮತ್ತು ಕಿರಿಯರ ವಿಭಾಗದ ವಚನ ನೃತ್ಯ ಮತ್ತು ಶರಣರ ವೇಷಭೂಷಣ ಸ್ಪರ್ಧೆಯನ್ನು ಕುವೆಂಪು ಕನ್ನಡ ಭವನದಲ್ಲಿ ನಡೆಸಲಾಯಿತು.

# ಜೈನ್ ಲೇಔಟ್‌ನಲ್ಲಿ ಪರಿಸರ ದಿನಾಚರಣೆ



ದಾವಣಗೆರೆ, ಜು. 7 - ನಗರದ ಜೈನ್ ಲೇಔಟ್ ನಲ್ಲಿ ಪರಿಸರ ದಿನಾಚರಣೆ ಆಚರಿಸಲಾಯಿತು. ಪಾಲಿಕೆ ಸದಸ್ಯರಾದ ಆಶಾ ಉಮೇಶ್ ಗಿಡ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪರಿಸರದ ಬಗ್ಗೆ ಜ್ಯೋತಿ, ಶಶಿಕಲಾ ಬಡದಾಳ್ ಮಾತನಾಡಿದರು.

# ಜೀವಜಲದ ಅವಾಂತರ...

ಜೀವಜಲ ತರುವ ಮಳೆಗಾಲವೇ
ಜೀವಕ್ಕೆ ಕುತ್ತು
ಬಿರಿದ ಭೂಮಿ
ಕುಸಿದ ಬದುಕು
ಕಣ್ಮರೆಯಾದ ಜೀವಗಳು

ವರುಣನ ರೌದ್ರ ನರ್ತನ
ಬದುಕು ಕಳೆದುಕೊಂಡವರ ಆರ್ತನಾದ
ಕಣ್ಣೀರ ಕಡಲು ಕೆನ್ನೆ ತುಂಬಾ
ಹಸಿದ ಒಡಲು ಊರ ತುಂಬಾ

ತುತ್ತು ಗಂಜಿಗೆ
ತವರ ತೊರೆದು
ಹೋದವರ ಬದುಕೀಗ ನಿರಾಶ್ರಿತ
ಕುಸಿವ ಧರೆಗೆ ಯಾರು ಇಡುವರು
ಪರಿಹಾರದ ಅಂಕಿತ

ಪ್ರತಿ ವಿಕೋಪಕ್ಕೂ ನಮ್ಮಲ್ಲಿ
ಉಳಿಯುವುದೊಂದೆ ಪರಿಹಾರ
ಯಾರು ಅರಿವರು ಪ್ರಕೃತಿಯ ಮೂಲ
ಭೇರ
ಶಿಲಾಪದರುಗಳ ಸರಿಸಿ
ಮೋಜಿನ ಅಭಿವೃದ್ಧಿ ಆಟವೇಕೆ.?
ಮತ್ತೆ ಮತ್ತೆ ನೋವಿನ ಅನುಭವದ
ಪಾಠ ಬೇಕೇ.?

- ಬಸವರಾಜ ಕರುವಿನ
ಬಸವನಾಳು.

# ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಆವರಣದಲ್ಲಿ ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮವು ಇಂದು ಬೆಳಿಗ್ಗೆ 11.30 ಕ್ಕೆ ನಡೆಯಲಿದೆ.

ಅಧ್ಯಕ್ಷತೆಯನ್ನು ಶ್ರೀಮತಿ ಶೈಲಜ ಎ.ಎಸ್. ವಹಿಸುವರು. ಕಾರ್ಯಕ್ರಮದಲ್ಲಿ 'ಜಾನಪದ ಸಾಹಿತ್ಯದಲ್ಲಿ ಮಹಿಳೆ' ವಿಷಯ ಕುರಿತು ಬಿ.ಟಿ. ಪ್ರಕಾಶ್ ಉಪನ್ಯಾಸ ನೀಡುವರು. ಶ್ರೀಮತಿ ಸುಮತಿ ಜಯಪ್ಪ ಪ್ರಾಸ್ತಾವಿಕ ನುಡಿಯನ್ನಾಡುವರು. ಕಾರ್ಯಕ್ರಮದಲ್ಲಿ ಡಾ. ಮಂಜಣ್ಣ ಎಂ. ಉಪಸ್ಥಿತರಿರುವರು. ಕಾರ್ಯಕ್ರಮದಲ್ಲಿ ಜಿ.ಎಸ್. ಪ್ರಕಾಶ್ ಶ್ರೀಮತಿ ಕಮಲಾ ಪ್ರಕಾಶ್ ಅವರಿಂದ ಜಿ.ಎಸ್. ಪ್ರಕಾಶ್, ಶ್ರೀಮತಿ ಕಮಲಾ ಪ್ರಕಾಶ್ ಸ್ಮರಣಾರ್ಥ ದತ್ತಿ, ಮೋತಿ ಪಿ. ರಾಮರಾವ್ ಇವರಿಂದ ಶ್ರೀಮತಿ ಗೌರಮ್ಮ ಮೋತಿ ಪಿ. ರಾಮರಾವ್ ಸ್ಮರಣಾರ್ಥ ದತ್ತಿ, ಶ್ರೀಮತಿ ಡಿ.ಎಂ. ಸರೋಜಿನಿ ಅವರಿಂದ ಶ್ರೀಮತಿ ಸರೋಜಿನಿ ದಕ್ಷಿಣಾಮೂರ್ತಿ ಸ್ಮರಣಾರ್ಥ ದತ್ತಿ ನಡೆಯುವುದು.

**ನಗರದಲ್ಲಿ ಇಂದು**

# ಖಾಜಾಮೈನುದ್ದೀನ್‌ಗೆ ತೃತೀಯ ಸ್ಥಾನ



ದಾವಣಗೆರೆ, ಜು. 7 - ಜಾರ್ಖಂಡ್‌ನಲ್ಲಿ ಈಚೆಗೆ ನಡೆದ ರಾಷ್ಟ್ರಮಟ್ಟದ 54 ಕೆ.ಜಿ. ವಿಭಾಗದ ಕುಸ್ತಿ ಪಂದ್ಯದಲ್ಲಿ ವಿಶ್ವಭಾರತಿ ವಿದ್ಯಾಪೀಠ ಶಾಲೆಯ 9ನೇ ತರಗತಿ ವಿದ್ಯಾರ್ಥಿ ಹೆಚ್.ಎಂ. ಖಾಜಾಮೈನುದ್ದೀನ್ ಅವರು ತೃತೀಯ ಸ್ಥಾನ ಪಡೆದಿರುತ್ತಾನೆ. ಅವರಿಗೆ ವಿಶ್ವಭಾರತಿ ಪ್ರೌಢಶಾಲೆಯ ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯರು ಅಭಿನಂದಿಸಿದ್ದಾರೆ.

# ಕುಸ್ತಿ : ಕಾಶೀನಾಥ್ ಪ್ರಥಮ

ದಾವಣಗೆರೆ, ಜು.7- ತಮಿಳುನಾಡಿನ ಕುಮಾರ್ ಪಲ್ಯಂನಲ್ಲಿ ಈಚೆಗೆ ಜರುಗಿದ ದಕ್ಷಿಣ ಭಾರತದ ಕುಸ್ತಿ ಸ್ಪರ್ಧೆಯಲ್ಲಿ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿ ಕಾಶಿನಾಥ್ ಬೀಳಗಿ 63.ಕೆಜಿ ವಿಭಾಗದ ಗ್ರಿಕೋ ರೋಮನ್‌ನಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

ವಿದ್ಯಾರ್ಥಿಗೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್.ಆರ್ ಅಂಜಿನಪ್ಪ, ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ.ರೇಖಾ ಎಂ.ಆರ್, ಕ್ರೀಡಾ ವಿಭಾಗದ ಸದಸ್ಯರುಗಳಾದ ಪ್ರೊ. ಭೀಮಣ್ಣ ಸುಣಗಾರ, ಪ್ರೊ.ಗಿರಿಸ್ವಾಮಿ, ಡಾ. ನಾರಾಯಣಸ್ವಾಮಿ, ಪ್ರೊ. ಜ್ಯೋತಿ, ಡಾ.ಯಶೋಧ, ಪ್ರೊ. ವೆಂಕಟೇಶ್ ಬಾಬು, ಪ್ರೊ. ಷಣ್ಮುಖ, ವ್ಯವಸ್ಥಾಪಕರಾದ ಗೀತಾದೇವಿ ಮತ್ತಿತರರು ಶುಭ ಹಾರೈಸಿದ್ದಾರೆ.

# ಕೆರಿಯರ್ ಕೌನ್ಸೆಲಿಂಗ್ ಕಾರ್ಯಕ್ರಮ



ದಾವಣಗೆರೆ, ಜು.7- ಹಿಂದೂ ಪತ್ರಿಕೆ ವತಿಯಿಂದ ಬಾಪೂಜಿ ಎಂಬಿಎ ಕಾಲೇಜಿನಲ್ಲಿ ಕೆರಿಯರ್ ಕೌನ್ಸೆಲಿಂಗ್ ಕಾರ್ಯಕ್ರಮವನ್ನು ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಉದ್ಘಾಟಿಸಿದರು. ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಉಪಸ್ಥಿತರಿದ್ದರು.

# ಇಂಡಕ್ಷನ್ ಪ್ರೋಗ್ರಾಂನ ಸಮಾರೋಪ



ದಾವಣಗೆರೆ, ಜು.7- ಕುವೆಂಪು ಕನ್ನಡ ಭವನದಲ್ಲಿ ಡಿ.ಆರ್. ಆರ್. ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಇಂಡಕ್ಷನ್ ಪ್ರೋಗ್ರಾಂನ ಸಮಾರೋಪ ಸಮಾರಂಭ ನಡೆಯಿತು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಅತಿಥಿಗಳಾಗಿ ಆಗಮಿಸಿದ್ದರು. ಪ್ರಾಂಶುಪಾಲ ಜಿ.ಬಿ.ಸದಾನಂದಪ್ಪ ಅಧ್ಯಕ್ಷತೆ ವಹಿಸಿದ್ದರು. ಸಂಯೋಜಕರಾದ ಡಾ.ಎ.ಎಂ.ರವಿ, ಜಾವೇದ್ ಇಕ್ಬಾಲ್ ಇತರರು ಭಾಗವಹಿಸಿದ್ದರು.

# ನಗರದ ವಜ್ರೇಶ್ವರಿ ಸಂಸ್ಥೆಯಿಂದ ಪ್ರವಾಸ



ದಾವಣಗೆರೆ, ಜು. 7 -ವಜ್ರೇಶ್ವರಿ ಮಹಿಳಾ ಸಂಸ್ಥೆಯಿಂದ ಸೊಂಡೂರಿಗೆ ಪ್ರವಾಸವನ್ನು ಅಧ್ಯಕ್ಷರಾದ ವಿಜಯ ಅಕ್ಕಿ ನೇತೃತ್ವದಲ್ಲಿ ಕೈಗೊಳ್ಳಲಾಗಿತ್ತು.


**ಕೆಲಸಕ್ಕೆ ಬೇಕಾಗಿದ್ದಾರೆ**
ನಿರ್‌ವಿನ್ಸ್ ಕೆಫೆಯಲ್ಲಿ ಕೆಲಸ ಮಾಡಲು ಉತ್ಸಾಹಿ ಯುವಕರು ಬೇಕಾಗಿದ್ದಾರೆ. ವಯಸ್ಸು - 18 ರಿಂದ 30. ಬೇಕರಿಯಲ್ಲಿ ಕೆಲಸ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ, ಪಿಯುಸಿ ಪಾಸ್ / ಫೇಲ್ ಸ್ಥಳ :ಆಂಜನೇಯ ಬಡಾವಣೆ, ದಾವಣಗೆರೆ. ಹೆಚ್ಚಿನ ಮಾಹಿತಿಗಾಗಿ
93804 69079

**ಸೈಟ್ ಮಾರಾಟಕ್ಕೆ(KHB)**
ಕರ್ನಾಟಕ ಹೌಸಿಂಗ್ ಬೋರ್ಡ್‌ನಲ್ಲಿ (ಕಮರ್ಷಿಯಲ್ ಆಗುವಂತಹ) 1)40X60 ಉತ್ತರ 80 ಅಡಿ ರಸ್ತೆಗೆ, 2) 60x78 ಪೂರ್ವ ದೊಡ್ಡ ಡಬಲ್ ಮೇನ್ ರೋಡ್‌ಗೆ
ಕಿರಣ್ ಬೂಸನೂರ್ (ಏಜೆಂಟ್ )
98440-63409, 97315-63409
ಸೈಟ್ ಮನೆ (ಮಾರಾಟಕ್ಕೆ ಕೊಳ್ಳುವುದಕ್ಕೆ ನಮ್ಮಲ್ಲಿ ವಿಚಾರಿಸಿ )

**ಮನೆ ಬಾಡಿಗೆ ಲೀಸ್‌ಗೆ**
2 BHK, 3 BHK ಬಾಡಿಗೆ / ಲೀಸ್ ಗೆ ಇದೆ. ಬಾಡಿಗೆ /ಲೀಸ್‌ಗೆ ಮನೆ ಬೇಕೇ ಅಥವಾ ಇದೆಯೇ ನಮಗೆ ಹೇಳಿ ನಾವು ಕೊಡಿಸುತ್ತೇವೆ.
ಕಿರಣ್ ಬೂಸ್ನೂರ್
98440-63409, 97315-63409

**ಸೆಕೆಂಡ್ ಹ್ಯಾಂಡ್ ಕಾರ್ ಮಾರಾಟಕ್ಕೆ ಮತ್ತು ಕೊಳ್ಳುವುದಕ್ಕೆ ನಮ್ಮಲ್ಲಿ ವಿಚಾರಿಸಿ.**
ಕಿರಣ್ ಬೂಸ್ನೂರ್
98440-63409, 97315-63409

**ಮನೆಯಲ್ಲಿ ನೀರು ಸೋರುವುದಕ್ಕೆ ಪರಿಹಾರ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗುವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್
81050 40110

**Translation Classes**
PSI ಇತರೆ Examsಗಾಗಿ
ಸಂಪರ್ಕಿಸಿ :
88925 59549

**ಬಾಡಿಗೆಗೆ ಇದೆ**
ದಾವಣಗೆರೆ ಹದಡಿ ಮುಖ್ಯರಸ್ತೆ, ಟಿ.ವಿ.ಎಸ್. ಶೋ ರೂಂ ಪಕ್ಕ, ಉದಯ ಮಾರ್ಟ್ (ವಾಣಿ ರೈಸ್ ಮಿಲ್) ಎದುರು, ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಸುಸಜ್ಜಿತವಾದ ಮಳಿಗೆ 1ನೇ ಮಹಡಿ ಎಲ್ಲಾ ರೀತಿಯ ವ್ಯಾಪಾರಗಳಿಗೆ ಯೋಗ್ಯವಾದ 1104 ಅಡಿಗಳು ಹಾಗೂ 3250 ಅಡಿ ಸೆಲ್ಲರ್ ಬಾಡಿಗೆಗೆ ಇದೆ. ಮತ್ತು 4508 ಮೇಲ್ಛಾವಣಿ ಖಾಲಿ ಜಾಗ ಬಾಡಿಗೆಗೆ ಇದೆ.
96205 95579, 87924 53686

**ಬೇಕಾಗಿದ್ದಾರೆ**
ದಾವಣಗೆರೆಯ ಶ್ರೀ ವಿನಾಯಕ ನಗರ ಸಾರಿಗೆ ಬಸ್ಸಿನಲ್ಲಿ ಕೆಲಸ ಮಾಡಲು ಡ್ರೈವರ್‌ಗಳು ಮತ್ತು ಪುರುಷ ಹಾಗೂ ಮಹಿಳಾ ಕಂಡಕ್ಟರ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ :
63647 83999

**ಬೇಕಾಗಿದ್ದಾರೆ**
2nd PUC ಆದ ಯುವಕರು ಗೋಲ್ಡ್ ಕಂಪನಿಯಲ್ಲಿ Marketing Executive ಆಗಿ ಕಾರ್ಯ ನಿರ್ವಹಿಸಲು ಬೇಕಾಗಿದ್ದಾರೆ ಆಸಕ್ತರು ಕೂಡಲೇ ಸಂಪರ್ಕಿಸಿ:
76193 28978

**ಮಾರಾಟಕ್ಕಿವೆ**
ಹೈಸ್ಕೂಲ್ ಮೈದಾನದ ಪದವಿ ಪೂರ್ವ ಕಾಲೇಜಿನ ಕಟ್ಟಡದ ಹಳೇಕಲ್ಲು ಬಂಡೆಗಳು ಮತ್ತು ಕಡಪಾ ಕಲ್ಲುಗಳು ಮತ್ತು ಮರದ ಹಳೆ ಬೀರುಗಳು, ಕುರ್ಚಿಗಳು ಮಾರಾಟಕ್ಕಿವೆ. ಸಂಪರ್ಕಿಸಿ :
99726 75765, 99452 56881

**ಜಮೀನು ಮಾರಾಟಕ್ಕಿದೆ**
ಹರಪನಹಳ್ಳಿ ತಾಲ್ಲೂಕು, ಕೊಟ್ಟೂರು ರಸ್ತೆ, ಚಿಗಟೇರಿ ಸರ್ಕಲ್ ಹತ್ತಿರದ ಲೋಲೇಶ್ವರ ಗ್ರಾಮದ ರಿ.ಸ.ನಂ.199/1, ಮೂರು ಎಕರೆ ಖುಷ್ಕಿ ಜಮೀನು ಮಾರಾಟಕ್ಕಿದೆ.
Honnurswamy Vanjre
87926 04196

**ತಕ್ಷಣ ಬೇಕಾಗಿದ್ದಾರೆ**
DTDC ಕೋರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವಿರುವ ಹುಡುಗರು ಬೇಕಾಗಿದ್ದಾರೆ.
ವಯಸ್ಸು : 20 ರಿಂದ 28 ವರ್ಷ
ಮೊ. : 97385 23711

**ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ**
Salary : 8000 to 12000
91130 53483, 97437 56647, 88678 53961
ವಿನೋಬ ನಗರ ಬಸ್‌ಸ್ಟಾಪ್, ಪಿ.ಬಿ. ರೋಡ್, ದಾವಣಗೆರೆ.

**ಬೇಕಾಗಿದ್ದಾರೆ**
ದಾವಣಗೆರೆ-ಹರಿಹರ ಮತ್ತು ರಾಣೇಬೆನ್ನೂರು ಸುತ್ತ-ಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ESI, PF ಸೌಲಭ್ಯ ಇದೆ.
ಹೈ ಅಲರ್ಟ್ ಸೆಕ್ಯೂರಿಟಿ ಸರ್ವಿಸ್.
ಮುಸ್ಲಿಂ ಹಾಸ್ಟೆಲ್, ದಾವಣಗೆರೆ
78990 15677, 96113 94063

**ಮನೆ ಬಾಡಿಗೆಗೆ ಇದೆ**
ಎಂಸಿಸಿ ಬಿ ಬ್ಲಾಕ್ ಕುವೆಂಪು ನಗರದಲ್ಲಿರುವ ಶಂಕರ ಲೀಲಾ ಅಪಾರ್ಟ್‌ಮೆಂಟ್ (ಹಳೇ ಶಂಕರ ಲೀಲಾ ಕಲ್ಯಾಣ ಮಂಟಪ) ನಲ್ಲಿ 2BHK ಮನೆ ಬಾಡಿಗೆಗೆ ಇದೆ.
ಸಂಪರ್ಕಿಸಿ
99164 54770

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಅಡಿಕೆ ತೆಂಗು , ಮಾವು ಸಪೋಟ, ಶ್ರೀಗಂಧ, ಹೆಬ್ಬೇವು, ಮಹಾಘನಿ, ನಿಂಬೆ, ದಾಳಿಂಬೆ, ಗುಲಾಬಿ ಇನ್ನಿತರೆ ಗಿಡಗಳು ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ. ಸಂಪರ್ಕಿಸಿ.
94484 39639

**ಅಕ್ಷಯ**
ಬೆಳ್ಳಿ ಮತ್ತು ಚಿನ್ನಾಭರಣಗಳ ಖರೀದಿ. ಈ ದಿನ Online ಬೆಲೆಗೆ
ಸಂಪರ್ಕಿಸಿ:
76193 28978

**ಹುಡುಗರು ಬೇಕಾಗಿದ್ದಾರೆ**
ವಿದ್ಯಾ ನಗರದಲ್ಲಿ ಇರುವ ಮೆಗಾ ಮಾರ್ಟ್ ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ
ಕೆಲಸದ ಸಮಯ ಬೆಳಗ್ಗೆ 9.30 ರಿಂದ ರಾತ್ರಿ 9. ರವರೆಗೆ ಮಧ್ಯಾಹ್ನ ಊಟದ ಜೊತೆ ಟೀ ಮತ್ತು ಸ್ನ್ಯಾಕ್ಸ್ ವ್ಯವಸ್ಥೆ ಇರುತ್ತದೆ (ಸಂಬಳ 10000)
8134034264, 8197517215

**WANTED**
Office staff -05 posts, Team Leaders-03 posts.
Quali : B.Com ,BCA, B.Sc, MBA, M.Com,
Walk In Interview
July 9Th And 10Th Saturday & Sunday \
Empire Trading MSM Plaza, DCMCircle, DCM Township Davanagere-04
Contact : 08192 466181
76760 63979, 99866 65474

**ದಾಖಲಾತಿಗಳು ಕಳೆದಿವೆ**
ಟಿ.ವಿ. ಹರೀಶ್ ಆದ ನಾನು ನನ್ನ ಸೈಟ್ ಡಾಕ್ಯುಮೆಂಟ್ ಸರ್ವೆ ನಂ. (ಯರಗುಂಟೆ ಗ್ರಾಮ 19/2A) ನಂ. 7148-(1991-92) ಅನ್ನು ಬೈಕಿನಲ್ಲಿ ಹೋಗುವಾಗ ಕಳೆದುಕೊಂಡಿರುತ್ತೇನೆ. ದಯವಿಟ್ಟು ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗೆ ನಾನು ನೀಡಿರುವ ವಿಳಾಸಕ್ಕೆ ತಲುಪಿಸಿ.
ಓಂಕುಮಾರಸ್ವಾಮಿ ವಕೀಲರು
78929 31783

**2 and 3 bedroom flat for sale**
Om sai Balaji apartment, Near bapuji high school. Near retired government employees bavana M.C.C B Block
98452 62032, 94498 24866

**Receptionist For Hospital**
9.AM to 3 PM,
6 PM to 9 AM. 24 Hrs,
Male / Female Any Age
(Even Retired)
Good English hand writing
Contact :
81238 95187

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**WANTED**
Banking sector tele caller (Female Only)
Qualification - Any degree / PUC
No. 2257/5 2nd Floor, MCC `A' Block
Beside Togataveera Kalyana Mantapa
96869 56142
Interview time : 11 AM

**ಬೇಕಾಗಿದ್ದಾರೆ**
ಅಕೌಂಟೆಂಟ್ ಹುದ್ದೆಗೆ ಲೇಡೀಸ್ ಬೇಕಾಗಿದ್ದಾರೆ. ಕಲಿಯುವವರಿಗೂ ಅವಕಾಶವುಂಟು ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
ಮೊ. 91108 98377

**ದಾಖಲಾತಿಗಳು ಕಳೆದಿವೆ**
#2823=1973-74, #3629=1975-76 dated : 24.9.1973ರ ದಾವಣಗೆರೆ ಸಿಟಿ, 5ನೇ ವಾರ್ಡ್ 8ನೇ, ಡಿವಿಸನ್, ಕೆ.ಟಿ.ಜೆ ನಗರ, ಸೈಟ್ ನಂ. 353, ಪಶ್ಚಿಮ ಭಾಗ ಅಳತೆ 15x40 ದಾಖಲಾತಿಗಳು ಕಳೆದು ಹೋಗಿರುತ್ತವೆ.ತಂದುಕೊಟ್ಟರೆ ಸೂಕ್ತ ಬಹುಮಾನ ನೀಡಲಾಗುವುದು. ಸಂಪರ್ಕಿಸಿ :
96060 50591

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ – ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ಪ್ರವೇಶ ಪ್ರಕಟಣೆ 2022-23**
ಹೆಲ್ತ್ ಇನ್ಸ್‌ಪೆಕ್ಟರ್ DHI
ಲ್ಯಾಬ್ ಟೆಕ್ನಾಲಜಿ DMLT
ಇಮೇಜಿಂಗ್ ಟೆಕ್ನಾಲಜಿ X-ray
ಆಪರೇಷನ್ ಟೆಕ್ನಾಲಜಿ DOT
ಡಿಪ್ಲೋಮೋ ಫಾರ್ಮಸಿ D pharm
ಕೆಲವೇ ಸೀಟುಗಳು ಮಾತ್ರ
ಎಲ್ಲ ವಿದ್ಯಾರ್ಥಿಗಳಿಗೂ ಸ್ಕಾಲರ್‌ಶಿಪ್ ಸೌಲಭ್ಯವಿದೆ, ಹಾಸ್ಟೆಲ್ ಸೌಲಭ್ಯವಿದೆ.
VS PARAMEDICAL COLLEGE, DAVANAGERE.
8553278258
9019580600

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೋರಿಯರ್ ಸೌಲಭ್ಯವಿದೆ.
97432 17566, 91084 18233

**TEACHERS WANTED**
For Spoken English and Abacus at Davangere.
Contact :
90360 32050
(Whats'app)

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree, Pharmacy & BHMS (Government & Private Collage)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87620 58369, 90080 67049

**2BHK ಫ್ಲಾಟ್ ಮಾರಾಟಕ್ಕಿದೆ**
2 BHK ಫ್ಲಾಟ್ ಮಾರಾಟಕ್ಕಿದೆ. ಎಂಸಿಸಿ ಬಿ ಬ್ಲಾಕ್, ದಾವಣಗೆರೆ.
96863 96992
99001 18054

**ಸೈಟು ಮಾರಾಟಕ್ಕಿದೆ**
ನಿಟುವಳ್ಳಿಯಿಂದ S S ಹೈಟೆಕ್ ಆಸ್ಪತ್ರೆಗೆ ಹೋಗುವ ದಾರಿಯಲ್ಲಿರುವ ಪೆಟ್ರೋಲ್ ಬಂಕ್ ಪಕ್ಕದಲ್ಲಿರುವ ಸೈಟ್ 37.5x90 = 3354 Sq.ft ಮಾರಾಟಕ್ಕಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
81973 00410

**ಸಾಲಗಳಿಗಾಗಿ ಸಂಪರ್ಕಿಸಿ**
ಕಡಿಮೆ ಬಡ್ಡಿ ದರದಲ್ಲಿ ಮನೆ ಕಟ್ಟಲು, ಮನೆ ತೆಗೆದುಕೊಳ್ಳಲು, ಸೈಟ್ ಖರೀದಿ, ಮನೆ ಅಡಮಾನ ಬೇರೆ ಬ್ಯಾಂಕಿನ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಪರ್ಸನಲ್ ಲೋನ್ ಮತ್ತು ವ್ಯವಹಾರ ಸಾಲಗಳಿಗಾಗಿ ಸಂಪರ್ಕಿಸಿ :
99455 22287

**Work From Home**
Male/ Female,
Full / Part time Hand writing work. Small to Capital Letter.
Earn Per Month. 10,000/- to 12,000/-
Calling time 10 AM to 7 PM
89718 52431

**ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ**
1) DEd/BEd/ ಯಾವುದೇ ಪದವಿ-01
2) ಕಂಪ್ಯೂಟರ್ ಟೀಚರ್-01, 3) ದೈಹಿಕ ಶಿಕ್ಷಕರು-01
ನಿಸರ್ಗ ಪ್ರಾಥಮಿಕ ಹಾಗೂ ಪ್ರೌಢಶಾಲೆ, 'ಸಿ' ಬ್ಲಾಕ್, SOG ಬಡಾವಣೆ, ಇಂಡಸ್ಟ್ರಿಯಲ್ ಏರಿಯಾ, ದಾವಣಗೆರೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
87927 02690
99862 26454 98444 43374

**WANTED**
1. Lab Technician - Dip. in Lab technician
2. Receptionist - Any degree holder can Apply
Shilpa Diagnostics,
MCC B Block,
Near Swimming Pool, Davangere.
98440 65638

ಓಂ ಶ್ರೀ ಸಾಯಿ ಅನ್ನಪೂರ್ಣೇಶ್ವರಿ ಜ್ಯೋತಿಷ್ಯಾಲಯ
**ನೀವು ತುಂಬಾ ನೊಂದಿದ್ದೀರಾ?**
ಗಂಡ ಹೆಂಡತಿ ಕಲಹ, ಪ್ರೀತಿಯಲ್ಲಿ ನಂಬಿ ಮೋಸ, ಸ್ತ್ರೀ ಪುರುಷ ವಶೀಕರಣ, ವ್ಯಾಪಾರದಲ್ಲಿ ನಷ್ಟ, ಲೈಂಗಿಕ ಸಮಸ್ಯೆ, ಸಾಲಬಾಧೆ, ಮನೆಯಲ್ಲಿ ಅಶಾಂತಿ. 100% ಪರಿಹಾರ ಶತಸಿದ್ಧ.
ಪಂಡಿತ್ ಆನಂದ ಗುರೂಜಿ
96064 23948

**WANTED**
COMPUTER OPERATOR
Should know kannada and English typing
Somanahalli Provision Store
Doddapete, Davanagere.
98801 51580

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಬೇಕಾಗಿದ್ದಾರೆ**
ಮಹಿಳಾ ಟೈಲರ್‌ಗಳು ಹಾಗೂ ಹೆಲ್ಪರ್‌ಗಳು ಬೇಕಾಗಿದ್ದಾರೆ.
ಎಂ.ಎಸ್.ಆರ್. ಟೆಕ್ಸ್‌ಟೈಲ್ಸ್
#58-A, DC ಆಫೀಸ್ ರಸ್ತೆ, ಕರೂರು ಇಂಡಸ್ಟ್ರೀಸ್, ಏರಿಯಾ, ದಾವಣಗೆರೆ-6.
ಮೊ. : 88848 35899

**WANTED TEACHERS**
SKP Vidyapeeta (R), Davangere
For English medium school to teach English subject
Qualification : D.Ed, or BA, B.Ed
SRI VASAVI ENGLISH MEDIUM HIGHER PRIMARY SCHOOL
Devaraj urs layout 'C' block 5th cross, Davanagere-6. Contact immediately.
98447 45888

# ಪ್ರವಚನ ಕೇಳುವುದರಿಂದ ಜೀವನ ಪಾವನ

## ಪ್ರವಚನ ಕಾರ್ಯಕ್ರಮ ಉದ್ಘಾಟಿಸಿದ ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್



ದಾವಣಗೆರೆ, ಜೂ.7- ಲಿಂ. ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ 65ನೇ ವರ್ಷದ ಸ್ಮರಣೋತ್ಸವ 'ಶರಣ ಸಂಸ್ಕೃತಿ' ಉತ್ಸವ, ಶ್ರೀ ಮುರುಘರಾಜೇಂದ್ರ ಶಿವಯೋಗಿಗಳವರ ಲಿಂಗೈಕ್ಯ ಶತಮಾನೋತ್ಸವ, ಡಾ.ಶಿವಮೂರ್ತಿ ಮುರುಘಾ ಶರಣರ ಶೂನ್ಯ ಪೀಠಾರೋಹಣದ ತೃತೀಯ ದಶಮಾನೋತ್ಸವದ ಅಂಗವಾಗಿ ನಗರದ ಬಸವ ಕೇಂದ್ರದ ಶ್ರೀ ಶಿವಯೋಗಾಶ್ರಮದಲ್ಲಿ ಇಂದಿನಿಂದ 11ರವರೆಗೆ ಹಮ್ಮಿಕೊಳ್ಳಲಾಗಿರುವ ವಿಶೇಷ ಪ್ರವಚನ ಮಾಲೆಗೆ ಸಂಜೆ ಚಾಲನೆ ನೀಡಲಾಯಿತು.

ಜನವಾಡದ ಪ್ರವಚನಕಾರ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಪ್ರವಚನ ಕಾರ್ಯಕ್ರಮ ನಡೆಸಿಕೊಟ್ಟರು. ಇದಕ್ಕೂ ಮುನ್ನ ಮಹಾನಗರ ಪಾಲಿಕೆ ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅಜಯ್ ಕುಮಾರ್, ಪ್ರವಚನ ಕೇಳುವುದರಿಂದ ಜೀವನವೇ ಪಾವನವಾಗುತ್ತದೆ. ಮುರುಘಾ ಮಠ ಹಾಗೂ ಇಲ್ಲಿನ ಆಡಳಿತ ಮಂಡಳಿಯು ಪ್ರವಚನ ಕಾರ್ಯಕ್ರಮ ನಡೆಸುವ ಮೂಲಕ ಜನರಲ್ಲಿ ಸಂಸ್ಕೃತಿ, ಸಂಸ್ಕಾರ ಬಿತ್ತುವ ಕೆಲಸ ಮಾಡುತ್ತಿದೆ. ಜನರು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಕಳೆದ 25-30 ವರ್ಷಗಳ ಹಿಂದೆ ನಗರದ ರಂಗಾವಧೂತರ ಮಠದಲ್ಲಿ ಪ್ರವಚನ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿತ್ತು. ಪ್ರಚವನದ ಬಗ್ಗೆ ಅಷ್ಟಾಗಿ ತಿಳಿಯದಿದ್ದರೂ ನಾನು ಹೋಗಿ ಕುಳಿತುಕೊಂಡು ಆಲಿಸುತ್ತಿದ್ದೆ. ಇದರಿಂದಾಗಿಯೇ ನಾನು ಇಂದು ಉತ್ತಮ ವ್ಯಕ್ತಿಯಾಗಲು ಸಾಧ್ಯವಾಗಿದೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಮೊಬೈಲ್ ಹಾಗೂ ಟಿವಿ ಹಾವಳಿಯಿಂದಾಗಿ ಜನರು ಪ್ರವಚನ ಕೇಳುವ ಆಸಕ್ತಿ ಕಳೆದುಕೊಂಡಿದ್ದಾರೆ. ಟಿವಿ ಅಥವಾ ಮೊಬೈಲ್ ತಾತ್ಕಾಲಿಕ ಮನರಂಜನೆ ನೀಡುತ್ತವೆ. ಆದರೆ ಪ್ರವಚನದಲ್ಲಿ ತಿಳಿಯುವ ವಿಷಯಗಳನ್ನು ಅರಿತು ಜೀವನದಲ್ಲಿ ಅಳವಡಿಸಿಕೊಂಡಾಗ ಜೀವನವೇ ಪಾವನವಾಗುತ್ತದೆ ಎಂದು ನುಡಿದರು.

ಲಿಂ.ಜಯದೇವ ಜಗದ್ಗುರುಗಳು ಯೋಗಿಗಳು, ತ್ಯಾಗಿಗಳು ಆಗಿದ್ದರು. ಅವರ ಸ್ಮರಣೋತ್ಸವಕ್ಕೆ ಪ್ರವಚನ ಕಾರ್ಯಕ್ರಮ ನಡೆಸುವ ಮೂಲಕ ಚಾಲನೆ ನೀಡಲಾಗುತ್ತಿದೆ. ಇಂತಹ ಕಾರ್ಯಕ್ರಮವನ್ನು ನಾನು ಉದ್ಘಾಟಿಸುತ್ತಿರುವುದು ನನ್ನ ಸೌಭಾಗ್ಯವೇ ಸರಿ ಎಂದರು.

ಜಯದೇವ ಪ್ರಸಾದ ನಿಲಯದ ಕಾರ್ಯದರ್ಶಿ ಎಂ.ಜಯಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಓಂಕಾರಪ್ಪ, ಕಣಕುಪ್ಪಿ ಮುರುಗೇಶಪ್ಪ ಇತರರು ಉಪಸ್ಥಿತರಿದ್ದರು.

# ಕಾರ್ಮಿಕರ ಸಮಸ್ಯೆಗಳನ್ನು ಆಲಿಸಿ, ಪರಿಹಾರ ಒದಗಿಸಿ



ದಾವಣಗೆರೆ, ಜು.7- ಕಾರ್ಮಿಕರು ಹೆಚ್ಚು ವಾಸವಿರುವ ಕಾಲೋನಿ, ಕಾರ್ಖಾನೆ ಆವರಣಗಳಲ್ಲಿ ಮತ್ತು ಅಸಂಘಟಿತ ಕಾರ್ಮಿಕರು ವಾಸ ಹಾಗೂ ಕೆಲಸ ಮಾಡುವ ಸ್ಥಳಗಳಲ್ಲಿ ಕಾರ್ಮಿಕ ಅದಾಲತ್ ಉದ್ದೇಶಗಳನ್ನು ತಿಳಿಸಿ, ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಅರಿವು ನೀಡಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ತಿಳಿಸಿದರು.

ಗುರುವಾರ ನಗರದ ಜಿಲ್ಲಾ ನ್ಯಾಯಾಲಯದ ಸಂಕೀರ್ಣದಲ್ಲಿ ಕಾರ್ಮಿಕ ಇಲಾಖೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಬೆಂಗಳೂರು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಇವರ ಸಹಯೋಗದಲ್ಲಿ ಕಾರ್ಮಿಕ ಅದಾಲತ್ ಪ್ರಚಾರ ವಾಹನಗಳಿಗೆ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಕಾರ್ಮಿಕರು ತಮ್ಮ ಸೌಲಭ್ಯಗಳನ್ನು ಪಡೆದುಕೊಳ್ಳಲು ಕಾರ್ಮಿಕ ಇಲಾಖೆಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬೇಕು. ಹಾಗೂ ಕಾರ್ಮಿಕರ ಸಮಸ್ಯೆಗಳನ್ನು ಆಲಿಸಿ ಅವರಿಗೆ ಪರಿಹಾರ ಒದಗಿಸಬೇಕು ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕಾರ್ಮಿಕ ಅಧಿಕಾರಿ ಇಬ್ರಾಹಿಂ ಸಾಬ್, ರಾಜ್ಯಾದ್ಯಂತ ಕಾರ್ಮಿಕ ಅದಾಲತ್ತನ್ನು ದಿನಾಂಕ 15.7.2022ರಿಂದ 15.8.2022ರವರೆಗೆ ಹಮ್ಮಿಕೊಂಡಿದ್ದು, ಅದರ ಭಾಗವಾಗಿ ಇಲಾಖೆ ಸೌಲಭ್ಯ ಪಡೆದುಕೊಳ್ಳಲು ಪ್ರಚಾರ ನೀಡುವ ಸಲುವಾಗಿ ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಅಲ್ಲದೇ ಕಾರ್ಮಿಕ ಅರ್ಜಿಗಳನ್ನು ಸ್ವೀಕರಿಸಿ ನಿಯಮಾನುಸಾರ ವಿಲೇ ಮಾಡುವುದಾಗಿ ತಿಳಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು, ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರವೀಣ್ ನಾಯ್ಕ, ಹಿರಿಯ ನ್ಯಾಯಾವಾದಿ ಎಲ್.ಹೆಚ್.ಅರುಣ್‌ಕುಮಾರ್, ವಕೀಲ ಸಂಘದ ಉಪಾಧ್ಯಕ್ಷ ಬಿ.ಬಿ.ರಾಮಪ್ಪ, ಜಿಲ್ಲಾ ನ್ಯಾಯಾಲದ ಮುಖ್ಯ ಆಡಳಿತಾಧಿಕಾರಿ ಶ್ರೀನಿವಾಸ್, ಸಹಾಯಕ ಕಾರ್ಮಿಕ ಆಯುಕ್ತ ಎಸ್.ಆರ್.ವೀಣಾ, ಕಾರ್ಮಿಕ ನಿರೀಕ್ಷಕ ನಾಗೇಶ್ ಹಿರೇಮಠ್, ಕಾರ್ಮಿಕ ಇಲಾಖೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಗಮನ ಸೆಳೆದ ಭದ್ರಾ ಕಾಲೇಜಿನ ಫುಡ್ ಫೆಸ್ಟಿವಲ್



ದಾವಣಗೆರೆ, ಜು. 7- ಇಂದಿನ ಯುವ ಜನಾಂಗಕ್ಕೆ ಆಹಾರ, ನೀರು, ಗಾಳಿ ಹಾಗೂ ಪ್ರಕೃತಿಯ ಪರ ಮನುಷ್ಯನ ಸಹಕಾರ, ಒಲುಮೆ ಬೆಳೆಸುವ ಜೊತೆಗೆ ಅವುಗಳ ಸೂಕ್ತ ನಿರ್ವಹಣೆಯ ನೈಪುಣ್ಯತೆಯ ಅವಶ್ಯಕತೆ ಇದೆ ಎಂದು ಬಿಐಇಟಿ ಕಾಲೇಜಿನ ಪ್ರಾಂಶುಪಾಲ ಡಾ. ಹೆಚ್.ಬಿ ಅರವಿಂದ್ ಹೇಳಿದರು.

ನಗರದ ಭದ್ರಾ ಕಾಲೇಜು ವತಿಯಿಂದ ಬಾಪೂಜಿ ಬ್ಯಾಂಕ್ ಸಮುದಾಯ ಭವನದ ಆವರಣದಲ್ಲಿ ಮೊನ್ನೆ ಏರ್ಪಡಿಸಿದ್ದ ಭದ್ರಾ ಪದವಿ ಹಾಗೂ ಸ್ನಾತಕೋತ್ತರ ಕಾಲೇಜಿನ ಫುಡ್ ಫೆಸ್ಟಿವಲ್ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜಾಗತಿಕ ತಾಪಮಾನದ ಪರಿಣಾಮ ಜಗತ್ತಿನ ಮೇಲೆ ಸೃಷ್ಟಿಸುವ ದುಷ್ಪರಿಣಾಮದ ಅರಿವನ್ನು ಮೂಡಿಸಿದರು. ವಿದ್ಯಾರ್ಥಿ ಸಮೂಹಕ್ಕೆ ಪರಿಸರ ಕಾಳಜಿ ಹಾಗೂ ಬದ್ಧತೆ, ಪಠ್ಯಗಳ ಜೊತೆ ಶೈಕ್ಷಣಿಕ ಸಂಸ್ಥೆಗಳನ್ನು ಬೆಳೆಸಿಕೊಳ್ಳಬೇಕೆಂದರು.

ಈ ತೆರನಾದ ಆಹಾರ ಮೇಳಗಳು ಈ ಹಿಂದೆಯೇ ನಮ್ಮ ಹಳ್ಳಿಗಳ ಸಾಂಸ್ಕೃತಿಕ ಬದುಕಿನಲ್ಲಿ ಸೇರಿಕೊಂಡಿದ್ದವು. ಆದರೆ, ಈಗ ಅವುಗಳನ್ನು ಮೇಳಗಳ ಮೂಲಕ ನೆನಪಿಸಿಕೊಳ್ಳುವಂತಾಗಿದೆ. ಇದು ನಮ್ಮ ಸಾಂಸ್ಕೃತಿಕ ಪ್ರತಿಬಿಂಬವಾಗಿದೆ ಎಂದರು.

ಸಾಯಿ ಇಂಟರ್‌ನ್ಯಾಷನಲ್ ವ್ಯವಸ್ಥಾಪಕ ನಿರ್ದೇಶಕ ಅಶೋಕ್ ಪಿ. ಜನ್ನು ಮಾತನಾಡಿ, ಯುವಜನತೆಗೆ ವ್ಯವಹಾರಿಕ ಜ್ಞಾನ, ನಿರ್ವಹಣೆಯ ಕುರಿತು ಅನುಭವ ಹಾಗೂ ಪರಿಣಿತಿಯ ಅವಶ್ಯಕತೆ ಇದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ವಿವಿ ಮತ್ತು ಕಾಲೇಜು ಅಧ್ಯಾಪಕರ ಒಕ್ಕೂಟದ ಮಾಜಿ ಅಧ್ಯಕ್ಷ ಪ್ರೊ.ಸಿ.ಹೆಚ್. ಮುರುಗೇಂದ್ರಪ್ಪ ಮಾತನಾಡಿ, ಫುಡ್ ಫೆಸ್ಟಿವಲ್ ಜೊತೆಗೆ ವಿದ್ಯಾರ್ಥಿಗಳು ಅಧ್ಯಯನದಲ್ಲಿ ಉತ್ತಮ ಫಲಿತಾಂಶ ತರುವ ಮೂಲಕ ಕಾಲೇಜು ಮತ್ತು ಪೋಷಕರಿಗೆ ಕೀರ್ತಿ ತರಬೇಕೆಂದು ಶುಭ ಹಾರೈಸಿದರು.

ಅಧ್ಯಕ್ಷತೆ ವಹಿಸಿದ್ದ ಭದ್ರಾ ಪದವಿ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರದ ಪ್ರಾಚಾರ್ಯ ಪ್ರೊ.ಟಿ. ಮುರುಗೇಶ್ ಮಾತನಾಡಿದರು. ಭದ್ರಾ ಪದವಿ ಪೂರ್ವ ಕಾಲೇಜು ಪ್ರಾಚಾರ್ಯ ಡಿ. ಚಂದ್ರಪ್ಪ, ಭದ್ರಾ ಎಜುಕೇಶನ್ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟ್ ಎಂ. ಸಂಕೇತ್ ಮತ್ತಿತರರು ಉಪಸ್ಥಿತರಿದ್ದರು.

ಸಹನ ಮತ್ತು ಕಾಂಚನ ನಿರೂಪಿಸಿದರು. ಸುಜೈನ್ ಮತ್ತು ತಯ್ಯಾಬ್ ಸ್ವಾಗತಿ ಸಿದರು. ಸ್ವಾತಿ ಮತ್ತು ಸುಮ ವಂದಿಸಿದರು. ಕಾವ್ಯ ಮತ್ತು ರಚನಾ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

# ಜಿಲ್ಲಾ ಸರ್ಕಾರಿ ನಿ.ನೌಕರರ ಸಂಘದ ಅಧ್ಯಕ್ಷರಾಗಿ ಉಜ್ಜನಪ್ಪ



ದಾವಣಗೆರೆ, ಜು.6- ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷರಾಗಿ ಎ.ಆರ್.ಉಜ್ಜನಪ್ಪ ಆಯ್ಕೆಯಾಗಿದ್ದಾರೆ.

ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸಂಘದ 13 ನಿರ್ದೇಶಕರುಗಳ ಸ್ಥಾನಕ್ಕೆ ಚುನಾವಣೆ ನಡೆದಿತ್ತು. ಈ ಹಿನ್ನೆಲೆಯಲ್ಲಿ ಮೊನ್ನೆ ಸಂಘದ ಕಛೇರಿಯಲ್ಲಿ ನಡೆದ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಉಜ್ಜನಪ್ಪ ಅವಿರೋಧವಾಗಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಉಜ್ಜನಪ್ಪ ಅವರನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ವಾಮದೇವಪ್ಪ, ಗೌರವ ಕಾರ್ಯದರ್ಶಿಗಳಾದ ಬಿ.ದಿಳ್ಯಪ್ಪ, ರೇವಣಸಿದ್ದಪ್ಪ ಅಂಗಡಿ, ಗೌರವ ಕೋಶಾಧ್ಯಕ್ಷ ಕೆ.ರಾಘವೇಂದ್ರ ನಾಯರಿ ಅಭಿನಂದಿಸಿದ್ದಾರೆ.

# ಬ್ಯಾಂಕ್ ನೌಕರರ ಒಕ್ಕೂಟಕ್ಕೆ ನಾಯರಿ



ದಾವಣಗೆರೆ, ಜು. 7 - ಕರ್ನಾಟಕ ರಾಜ್ಯ ಬ್ಯಾಂಕ್ ನೌಕರರ ಒಕ್ಕೂಟದ ಜಂಟಿ ಕಾರ್ಯದರ್ಶಿಯಾಗಿ ಕೆ.ರಾಘವೇಂದ್ರ ನಾಯರಿ ಅವರು ಮತ್ತೊಮ್ಮೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

# ಬೇಡ ಜಂಗಮರಿಗೆ ಕೂಡಲೇ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡಲು ಆಗ್ರಹ




ದಾವಣಗೆರೆ, ಜು. 7- ಬೇಡ ಜಂಗಮರಿಗೆ ಕೂಡಲೇ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡುವಂತೆ ಆಗ್ರಹಿಸಿ, ದಲಿತ ಡಿಪ್ರೆಸ್ಡ್ ದಾವಣಗೆರೆ ಜಿಲ್ಲಾ ಬೇಡ ಜಂಗಮ ಪರಿಶಿಷ್ಟ ಜಾತಿ ಕ್ಷೇಮಾಭಿವೃದ್ಧಿ ಸಂಸ್ಥೆ ವತಿಯಿಂದ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಬೇಡ ಜಂಗಮ ಪರಿಶಿಷ್ಟ ಜಾತಿ ಸಂವಿಧಾನಾತ್ಮಕ ಹಕ್ಕಿಗಾಗಿ ಸರ್ಕಾರ ವಿಳಂಬ ಮಾಡುತ್ತಿದ್ದು, ಸರ್ಕಾರಿ ಅಧಿಕಾರಿಗಳು ಜಾತಿ ಪ್ರಮಾಣ ಪತ್ರ ಕೊಡದೇ ಉಚ್ಚನ್ಯಾಯಾಲಯದ ಆದೇಶವನ್ನು ಗೌರವಿಸದೇ ಇರುವುದು ಖಂಡನೀಯ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಸಂಸದರು, ಶಾಸಕರು ಕೂಡ ಈ ಬಗ್ಗೆ ಗಮನಹರಿಸದೇ ಇರುವುದು ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತಿದೆ. ಕೂಡಲೇ ಎಸ್ಸಿ ಪ್ರಮಾಣ ಪತ್ರ ನೀಡಲು ಸರ್ಕಾರ ತುರ್ತು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಪ್ರಧಾನಮಂತ್ರಿಗಳು, ಮುಖ್ಯಮಂತ್ರಿಗಳು, ಸಮಾಜ ಕಲ್ಯಾಣ ಸಚಿವರಿಗೆ, ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ಎಂ. ಸಿದ್ಧಲಿಂಗಸ್ವಾಮಿ, ತಿಪ್ಪೇಸ್ವಾಮಿ, ವೀರಭದ್ರಸ್ವಾಮಿ, ಜಗದೀಶಸ್ವಾಮಿ, ಮುತ್ತಣ್ಣ, ಸತೀಶ, ಆವರಗೊಳ್ಳದ ಮಹಿಳಾ ಮುಖಂಡರು, ಅರ್ಚಕರು ಭಾಗವಹಿಸಿದ್ದರು.

# ಹರಿಹರ : ಮಳೆ ಮುಂಜಾಗ್ರತಾ ಕ್ರಮಕ್ಕೆ ತಹಶೀಲ್ದಾರ್ ಸೂಚನೆ



ಹರಿಹರ,ಜೂ. 7- ತಾಲ್ಲೂಕಿನಲ್ಲಿ ಕಳೆದ 5 ದಿನಗಳಿಂದ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಸಾರ್ವಜನಿಕರಿಗೆ ಮತ್ತು ಜಾನುವಾರುಗಳಿಗೆ ಯಾವುದೇ ರೀತಿಯ ತೊಂದರೆಗಳು ಆಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ತಹಶಿಲ್ದಾರ್ ಎಂ. ಬಿ. ಅಶ್ವಥ್ ಎರಡು ಹೋಬಳಿಗಳ ರಾಜಸ್ವ ನಿರೀಕ್ಷಕರಿಗೆ ಹಾಗೂ ತಾಲ್ಲೂಕಿನ ಎಲ್ಲಾ ಗ್ರಾಮ ಲೆಕ್ಕಾಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ತಹಶಿಲ್ದಾರ್ ಕಚೇರಿಯ ಸಭಾಂಗಣದಲ್ಲಿ ತಾಲ್ಲೂಕಿನ ಗ್ರಾಮ ಲೆಕ್ಕಧಿಕಾರಿಗಳ ಮತ್ತು ರಾಜಸ್ವ ನಿರೀಕ್ಷಕರ ಸಭೆಯಲ್ಲಿ ಅವರು ಮಾತನಾಡಿದರು.

ತಾಲ್ಲೂಕಿನಲ್ಲಿ ಇನ್ನೂ ಹೆಚ್ಚಿನ ಮಳೆ ಬರುವ ನಿರೀಕ್ಷೆ ಇದೆ. ಅಣೆಕಟ್ಟೆಗಳಲ್ಲಿ ನೀರಿನ ಹರಿವು ಹೆಚ್ಚಾದಂತೆ, ನದಿಗಳಿಗೆ ನೀರು ಬಿಡುವ ಸಾಧ್ಯತೆ ಇದೆ. ನದಿ ಪಾತ್ರದ ಗ್ರಾಮಗಳಲ್ಲಿ ಮುತುರ್ವಜಿಯಿಂದ ಕೆಲಸ ಮಾಡಬೇಕು ಎಂದವರು ತಿಳಿಸಿದ್ದಾರೆ.

ಗ್ರಾಮಗಳಲ್ಲಿ ಯಾವುದೇ ರೀತಿಯ ತೊಂದರೆಗಳು ಆಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ನದಿಯ ಪಕ್ಕದಲ್ಲಿ ವಾಸಿಸುವ ಸುರಕ್ಷಿತ ತಾಣಗಳಿಗೆ ತೆರಳಲು ಮತ್ತು ಅವರಿಗೆ ವಸತಿ ಸೌಕರ್ಯ ಜೊತೆಗೆ ಊಟ ಔಷಧೀಯ ವ್ಯವಸ್ಥೆ ಒದಗಿಸುವಂತೆ ಹೇಳಿದರು.

ಮಳೆಯ ಪ್ರಮಾಣ ಕಡಿಮೆ ಆದ ನಂತರದಲ್ಲಿ ಸರ್ವೇ ಮಾಡಿ ನಂತರದಲ್ಲಿ ಎಷ್ಟು ಬೆಳೆ ಮತ್ತು ಮನೆಗಳಿಗೆ ಹಾನಿಯಾಗಿದೆ ಎಂಬ ವರದಿ ಪಡೆಯಲು ಸಾಧ್ಯವಾಗಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಹಶಿಲ್ದಾರ್ ಕಚೇರಿಯ ಸಿಬ್ಬಂದಿ ಮಂಜುನಾಥ್, ರಾಜಸ್ವ ನಿರೀಕ್ಷಕರಾದ ಸಮೀರ್, ಆನಂದ್, ಗ್ರಾಮಲೆಕ್ಕಧಿಕಾರಿಗಳಾದ ಮಾರುತಿ, ದೇವರಾಜ್, ಮಲ್ಲಿಕಾರ್ಜುನ, ಜಬೀವುಲ್ಲಾ, ಸುಭಾನ್,ಶಿವಕುಮಾರ ಮತ್ತಿತರರು ಉಪಸ್ಥಿತರಿದ್ದರು.

# ಕಲೆ ಬದುಕಿನ ಸಂಜೀವಿನಿ

## ಮಕ್ಕಳಿಗೆ ಗ್ರಾಮೀಣ ಕಲೆ ಕಲಿಸಲು ಬಸವರಾಜ ಐರಣಿ ಕರೆ

ದಾವಣಗೆರೆ, ಜು. 7 - ಕಲೆ ಬದುಕಿನ ಸಂಜೀವಿನಿ. ಕಲೆ ಇಲ್ಲದೇ ಬದುಕಲು ಸಾಧ್ಯವೇ ಇಲ್ಲ. ಕಲೆಯ ಮೂಲ ಸೆಲೆಯಾಗಿರುವ ಗ್ರಾಮೀಣ ಕಲೆಗಳನ್ನು ಉಳಿಸಿಕೊಳ್ಳಲು ನೆರವಿನ ಜೊತೆಗೆ, ಕಲಾ ಪ್ರದರ್ಶನದ ವೇದಿಕೆಗಳನ್ನೂ ಕಲ್ಪಿಸಬೇಕಿದೆ ಎಂದು ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಬಸವರಾಜ ಐರಣಿ ಕರೆ ನೀಡಿದ್ದಾರೆ.

ಎಲೆಬೇತೂರಿನ ಬಸವೇಶ್ವರ ಗ್ರಾಮೀಣ ಸಾಂಸ್ಕೃತಿಕ ಕಲಾ ವೇದಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ನಗರದ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಲಾಗಿದ್ದ ನಾಟಕ ಮತ್ತು ವೀರಗಾಸೆ ಪ್ರದರ್ಶನ ಉದ್ಘಾಟಿಸಿ, ಅವರು ಮಾತನಾಡುತ್ತಿದ್ದರು.

ಮಕ್ಕಳಿಗೆ ಗ್ರಾಮೀಣ ಕಲಾ ಪ್ರಾಕಾರಗಳನ್ನು ಕಲಿಸಿದರೆ ಮಾತ್ರ, ಅವು ಮುಂದಿನ ಪೀಳಿಗೆಯವರೆಗೆ ಉಳಿಯುತ್ತವೆ. ಗ್ರಾಮೀಣ ಕಲೆಗಳನ್ನು ಮಕ್ಕಳ ಪಠ್ಯದಲ್ಲೂ ಸೇರಿಸಬೇಕು ಎಂದವರು ಅಭಿಪ್ರಾಯ ಪಟ್ಟರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಕೊರೊನಾ ಕಾರಣದಿಂದ ಎರಡು ವರ್ಷಗಳಿಂದ ಸಾಂಸ್ಕೃತಿಕ ವಾತಾವರಣ ಸ್ತಬ್ಧವಾಗಿತ್ತು.

ಈ ವರ್ಷ ಕಲಾವಿದರಿಗೆ ಕಲಾ ಪ್ರದರ್ಶನಕ್ಕೆ ಅವಕಾಶ ಕಲ್ಪಿಸುವ ಜೊತೆಗೆ ಮಾಸಾಶನ ಸೇರಿದಂತೆ ಅಗತ್ಯ ನೆರವು ಕಲ್ಪಿಸಲು ಇಲಾಖೆ ಕ್ರಮ ತೆಗೆದುಕೊಳ್ಳಲಿದೆ ಎಂದರು.

ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಬಿ.ಇ. ತಿಪ್ಪೇಸ್ವಾಮಿ ಮಾತನಾಡಿ, ಸಮಾಜದ ಕತ್ತಲೆ ಕಳೆದು ಬೆಳಕು ತೋರಲು ಕಲಾವಿದನಿಂದ ಸಾಧ್ಯ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಬಿ. ವಾಮದೇವಪ್ಪ ಮಾತನಾಡಿ, ಹಿರಿಯ ಕಲಾವಿದರಿಗೆ ಸರ್ಕಾರದ ವತಿಯಿಂದ ಮಾಸಾಶನ ನೀಡಲಾಗುತ್ತಿದೆ. ಈ ನೆರವು ಇದುವರೆಗೂ ತಲುಪದ ಅರ್ಹರಿಗೆ ಮಾಸಾಶನ ಒದಗಿಸಲು ಶ್ರಮಿಸಬೇಕಿದೆ ಎಂದರು.

ವೇದಿಕೆಯ ಮೇಲೆ ಸ್ಫೂರ್ತಿ ಸೇವಾ ಸಂಘದ ಅಧ್ಯಕ್ಷ ಎನ್.ಎಸ್. ರಾಜು, ಎಪಿಎಂಸಿ ಮಾಜಿ ಅಧ್ಯಕ್ಷ ಬಿ. ಗಂಗಾಧರಪ್ಪ, ಬಸವೇಶ್ವರ ಸಾಂಸ್ಕೃತಿಕ ಕಲಾ ವೇದಿಕೆಯ ಅಧ್ಯಕ್ಷ ಎನ್.ಎ. ವೀರಭದ್ರಯ್ಯ, ಕಾರ್ಯದರ್ಶಿ ನೀರ್ಥಡಿ ಬಸವರಾಜಪ್ಪ, ಕಲಾವಿದ ಹೆಚ್. ಮೆಹಬೂಬ್ ಅಲಿ ಮತ್ತಿತರರು ಉಪಸ್ಥಿತರಿದ್ದರು.

# 9 ರಂದು ಪರಂಪರೆ ಪುನರ್ ಮನನ ಧರ್ಮ ಸಮಾರಂಭ

ದಾವಣಗೆರೆ, ಜೂ.7- ಪರಂಪರೆ ಪುನರ್ ಮನನ ಧರ್ಮ ಸಮಾರಂಭ ಹಾಗೂ ಶ್ರೀ ಕೇದಾರ ಜಗದ್ಗುರುಗಳ ಸಂಗೀತಯುಕ್ತ ಇಷ್ಟಲಿಂಗ ಮಹಾಪೂಜೆಯನ್ನು ಇದೇ 9 ಹಾಗೂ 10ನೇ ತಾರೀಖು ಹಮ್ಮಿಕೊಳ್ಳಲಾಗಿದೆ ಎಂದು ದೂಡಾ ಅಧ್ಯಕ್ಷ ಕೆ.ಎಂ. ಸುರೇಶ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತ್ರಿಶೂಲ್ ಕಲಾಭವನದಲ್ಲಿ ಕಾರ್ಯಕ್ರಮ ನಡೆಯಲಿದ್ದು, 9ರ ಶನಿವಾರ ಸಂಜೆ 5ಕ್ಕೆ ಧರ್ಮ ಕಂಕಣಧಾರಣೆ, ಧ್ವಜ ಸಂಕಲ್ಪ, ಧರ್ಮ ಧ್ವಜಾರೋಹಣ ಹಾಗೂ ಧ್ವಜ ವಂದನೆ ಕಾರ್ಯಕ್ರಮ ಗಳು ನಡೆಯಲಿವೆ. ಸಂಜೆ 6 ಗಂಟೆಗೆ ಪರಂಪರೆ ಪುನರ್ ಮನನ ಧರ್ಮ ಸಮಾರಂಭವು ಶ್ರೀ ರಂಭಾಪುರಿ ಜಗದ್ಗುರು ಡಾ.ವೀರಸೋಮೇಶ್ವರ ರಾಜದೇಶಿ ಕೇಂದ್ರ ಶಿವಾಚಾರ್ಯ ಭಗವತ್ಪಾದರು ಹಾಗೂ ಕೇದಾರ ಪೀಠದ ಶ್ರೀ ಭೀಮಾಶಂಕರಲಿಂಗ ಶಿವಾಚಾರ್ಯ ಭಗವತ್ಪಾದರುಗಳ ದಿವ್ಯ ಸಾನ್ನಿಧ್ಯದಲ್ಲಿ ನಡೆಯಲಿದೆ.

ಕಣ್ವಕುಪ್ಪೆ ಗವಿಮಠದ ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಉಪದೇಶಾಮೃತ ನೀಡಲಿದ್ದಾರೆ. ರಾಜ್ಯಸಭಾ ಸದಸ್ಯರೂ, ಚಿತ್ರನಟರೂ ಆದ ಜಗ್ಗೇಶ್ ಸಮಾರಂಭ ಉದ್ಘಾಟಿಸಲಿದ್ದಾರೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷರೂ ಆದ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ್ ಆಗಮಿಸಲಿದ್ದಾರೆ.

ಸನಾತನ ಧರ್ಮ ಪರಂಪರೆ ಮತ್ತು ಮೌಲ್ಯಗಳು ಕುರಿತು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ವಿಶೇಷ ಉಪನ್ಯಾಸ ನೀಡಲಿದ್ದಾರೆ. ದಿ.10ರಂದು ಬೆಳಿಗ್ಗೆ 7 ಗಂಟೆಯಿಂದ ಶ್ರೀ ಹಿಮವತ್ಕೇದಾರ ಭೀಮಾಶಂಕರಲಿಂಗ ಜಗದ್ಗುರುಗಳವರ ಸಂಗೀತಯುಕ್ತ ಇಷ್ಟಲಿಂಗ ಮಹಾಪೂಜೆ ನಡೆಯಲಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಅಜ್ಜಂಪುರ ಶೆಟ್ರು ಮೃತ್ಯುಂಜಯ, ಕೆ.ಆರ್. ಶಿವಕುಮಾರ್, ಕಡೇಕೊಪ್ಪ ನಾಗಭೂಷಣ್, ಮಳಲಗೆರೆ ಗುರುಮೂರ್ತಿ, ರಾಜಶೇಖರ್, ನಾಗಪ್ಪ, ಟಿ.ಹೆಚ್.ಎಂ. ವೀರೇಶ್, ಕಲ್ಲೇಶ್, ಎನ್. ಮಲ್ಲನಗೌಡ, ಧನುಷ್ ಹಾಗು ಇತರರು ಉಪಸ್ಥಿತರಿದ್ದರು.

# ಕೃಷಿ, ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಉಪಾಧ್ಯಕ್ಷರಾಗಿ ಟಿ. ಜಗದೀಶ್ ಆಯ್ಕೆ

ಹರಪನಹಳ್ಳಿ, ಜು.7- ತಾಲ್ಲೂಕು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಉಪಾಧ್ಯಕ್ಷರಾಗಿ ತೋಗರಿಕಟ್ಟೆ ಕ್ಷೇತ್ರದ ಸದಸ್ಯ ಟಿ. ಜಗದೀಶ್ ಅವರು ಗುರುವಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹಲುವಾಗಲು ಕ್ಷೇತ್ರದ ಕುಂಚೂರು ಬಸವರಾಜಪ್ಪ ಅವರಿಂದ ತೆರವಾಗಿದ್ದ ಸ್ಥಾನಕ್ಕೆ ಗುರುವಾರ ನಡೆದ ಚುನಾವಣೆಯಲ್ಲಿ ಟಿ. ಜಗದೀಶ್ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧವಾಗಿ ಆಯ್ಕೆಯಾದರು ಎಂದು ಚುನಾವಣಾಧಿಕಾರಿ ಬಿ.ಕೆ. ಬಡಿಗೇರ್ ಘೋಷಿಸಿದರು.



ಹರಪನಹಳ್ಳಿ

ಈ ಸಂದರ್ಭದಲ್ಲಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾದ ಬೇಲೂರು ಸಿದ್ದೇಶ್, ನಿರ್ದೇಶಕರಾದ ಪಿ.ಎಲ್. ಪೋಮ್ಯಾನಾಯ್ಕ್, ಸಾಬಳ್ಳಿ ಜಂಬಣ್ಣ, ಪಿ. ಬೆಟ್ಟನಗೌಡ, ಪಿ.ಕೆ. ಮಹಾದೇವಪ್ಪ, ರೆಡ್ಡಿ ಶಾಂತಕುಮಾರ್, ಅಜ್ಜಳ ಬಸವರಾಜಪ್ಪ, ಬಿ. ರಾಜಕುಮಾರ್, ಲಾಟಿ ದಾದಾಪೀರ್, ಆರ್.ಶಿವಕುಮಾರ್, ವಿಶಾಲಕ್ಷಮ್ಮ, ಮುಖಂಡರಾದ ಬೇಲೂರು ಅಂಜಪ್ಪ, ಎಚ್. ಬಿ.ಪರಶುರಾಮಪ್ಪ, ಶಶಿಧರ್ ಪುಜಾರ್ ಪುರಸಭೆ ಮಾಜಿ ಅಧ್ಯಕ್ಷ ಹೆಚ್.ಕೆ. ಹಾಲೇಶ್, ಯಶವಂತಗೌಡ, ಪ್ರೇಮ್‌ಕುಮಾರ್, ಎಸ್. ಮಂಜುನಾಥ್, ಅಲಮರಸಿಕೇರಿ ಪರಶುರಾಮ್, ಚಿಗಟೇರಿ ಜಂಬಣ್ಣ, ನೀಲಗುಂದ ವಾಗೀಶ್, ಅರುಣ್ ಪುಜಾರ್ ಹೆಚ್. ದೇವರಾಜ್ ಸೇರಿದಂತೆ ಇತರರು ಇದ್ದರು.

# ಮೆಟ್ರಿಕ್ ನಂತರದ ಹಾಸ್ಟೆಲ್‌ಗೆ ಅರ್ಜಿ

ದಾವಣಗೆರೆ, ಜು.7- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಹೊಸದಾಗಿ ಪ್ರವೇಶ ಬಯಸುವ ಪಿ.ಯು.ಸಿ. ಮತ್ತು ಪಿ.ಯು.ಸಿ ಸಮಾನಂತರ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ಕಲ್ಪಿಸಲು ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಜುಲೈ 15 ರವರಗೆ ಅವಧಿ ವಿಸ್ತರಿಸಲಾಗಿದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

# ಅಂಚೆ : ವಿಭಾಗೀಯ ಡಾಕ್ ಅದಾಲತ್

ದಾವಣಗೆರೆ ಜು. 7 - ದಾವಣಗೆರೆ ಅಂಚೆ ವಿಭಾಗೀಯ ಡಾಕ್ ಅದಾಲತನ್ನು ಜು.14 ರಂದು ಮಧ್ಯಾಹ್ನ 4 ಕ್ಕೆ ನಗರದ ಅಂಚೆ ಅಧೀಕ್ಷಕರ ಕಚೇರಿ, ಪ್ರಧಾನ ಅಂಚೆ ಕಚೇರಿಯ ಮೊದಲನೇ ಮಹಡಿಯಲ್ಲಿ ನಡೆಸಲಾಗುವುದು.

ಮಲ್ಲಿಕಾರ್ಜುನ ಪ್ಯಾಕೇಜ್ ಟೂರ್ಸ್
ಬಟವಾಡಿ ವೃತ್ತ, ತುಮಕೂರು
ಫೋ: 84960 44942, 82774 09101
18.07.2022 ತಮಿಳುನಾಡು ಬಸ್ ಪ್ರವಾಸ :
ಶ್ರೀ ರಂಗಂ, ಮಧುರೈ, ರಾಮೇಶ್ವರ, ಕನ್ಯಾಕುಮಾರಿ, ಸುಚೀಂದ್ರಂ, ನಾಗರಕೊಯಿಲ್, ತ್ರಿವೆಂಡ್ರಂ (ಕೇರಳ ಶ್ರೀ ಅನಂತಪದ್ಮನಾಭಸ್ವಾಮಿ , ಕೋವಲಂ ಬೀಚ್) ಪಳನಿ, ಕೊಯಮತ್ತೂರು ಈಶ ಟೆಂಪಲ್
6 ದಿನಗಳು ರೂ. 13,900/-
03.09.22 ಗುಜರಾತ್ ವಿಮಾನ ಪ್ರವಾಸ :
ಪಟೇಲ್ ಪ್ರತಿಮೆ, ಸರ್ದಾರ್ ಡ್ಯಾಂ, ನಾಗೇಶ್ವರ ಜ್ಯೋತಿರ್ಲಿಂಗ, ಸೋಮನಾಥ ಜ್ಯೋತಿರ್ಲಿಂಗ, ಪೋರ್ ಬಂದರ್, ಬೆಟ್ ದ್ವಾರಕ, ದ್ವಾರಕ, ಸಬರಮತಿ ಆಶ್ರಮ, ಅಕ್ಷರಧಾಮ, ನಿಷ್ಕಳಂಕ ಮಹದೇವ
7 ದಿನಗಳು ರೂ. 29,500/-
30.08.22 ಹೈದರಾಬಾದ್ ರೈಲು ಪ್ರವಾಸ :
ರಾಮೋಜಿ ಫಿಲ್ಮ್‌ಸಿಟಿ, ಶ್ರೀ ರಾಮಾನುಜಾಚಾರ್ಯ ಪ್ರತಿಮೆ, ಚೌಮಾಲ ಪ್ಯಾಲೇಸ್, ಗೊಲ್ಕಂಡ ಪೋರ್ಟ್, ಸಾಲರ್ ಜಂಗ್ ಮ್ಯೂಸಿಯಂ, ಹುಸೇನ್ ಸಾಗರ್ ಬೋಟಿಂಗ್, ವಾಟರ್ ವರ್ಲ್ಡ್,
3 ದಿನಗಳು 6,500/-
ಎಲ್ಲಾ ಪ್ರವಾಸಕ್ಕೂ ತಿಂಡಿ, ಊಟ, ಡೀಲಕ್ಸ್ ರೂಂ ಸೇರಿದೆ (ಸ್ಥಳೀಯ ವೆಚ್ಚ ಪ್ರತ್ಯೇಕ)

ಬಹುದಿನಗಳ ನಂತರ ಆಕರ್ಷಕ ದೇಶ ನೋಡುವ ಅವಕಾಶ
ಥಾಯ್‌ಲ್ಯಾಂಡ್
ಪಟ್ಟಾಯ ಹಾಗೂ ಬ್ಯಾಂಗ್‌ಕಾಕ್
5 ದಿನಗಳು
ಕೇವಲ ₹ 56000
ವಿಮಾನದರ, ವಸತಿ, ಊಟ, ಪ್ರವೇಶ ಶುಲ್ಕ ಸೇರಿದೆ
ಥಾಯ್ ಏರ್‌ವೇಸ್ ನಲ್ಲಿ ಪ್ರಯಾಣ
ಪ್ರಯಾಣದ ದಿನ 25 ಜುಲೈ
ವಿವರಗಳಿಗೆ 9449984859/9448073129
MOTHI International HOLIDAYS

# ಅನಧಿಕೃತ ಗೋ/ಒಂಟೆ ಹತ್ಯೆ ತಡೆಯಿರಿ

## ಬಕ್ರೀದ್ ಹಬ್ಬ

ದಾವಣಗೆರೆ, ಜು.7- ಜಿಲ್ಲಾ ವ್ಯಾಪ್ತಿಯಲ್ಲಿ ಬಕ್ರೀದ್ ಹಬ್ಬದಂದು ಅನಧಿಕೃತ ಗೋ/ಒಂಟೆ ಹತ್ಯೆ ತಡೆಯುವ ಸಲುವಾಗಿ ಜಿಲ್ಲಾ ಮಟ್ಟದ ಅನಧಿಕೃತ ಪ್ರಾಣಿ ಹತ್ಯೆ ತಡೆ ಸಮಿತಿಯ ಸಭೆಯು ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇಂದು ಜರುಗಿತು.

ಸಭೆಯಲ್ಲಿ ಜಿಲ್ಲೆಯ ನಗರ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಅಕ್ರಮ ಜಾನುವಾರು ಸಾಗಾಣಿಕೆ ತಡೆಯಲು ಪೊಲೀಸ್, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಸಕ್ಷಮ ಪ್ರಾಧಿಕಾರಿಗಳಾದ ತಹಶೀಲ್ದಾರರು ಹಾಗೂ ಪಶು ವೈದ್ಯಾಧಿಕಾರಿಗಳು ಅನಧಿಕೃತ ಗೋ ಹತ್ಯೆ ನಡೆಯದಂತೆ ಅಗತ್ಯ ಕ್ರಮ ವಹಿಸಲು ಕ್ರಮ ವಹಿಸಲು ಸಮಿತಿ ಅಧ್ಯಕ್ಷರಾದ ಅಪರ ಜಿಲ್ಲಾಧಿಕಾರಿಗಳು ಸೂಚಿಸಿದ್ದಾರೆ.








ಡಾ. ಯದು ಕೆ. ಎಲ್.

ಸಲಹೆಗಾರರು ನರಶಸ್ತ್ರ ಚಿಕಿತ್ಸಕರು ಮತ್ತು ಬೆನ್ನುಮೂಳೆಯ ಶಸ್ತ್ರಚಿಕಿತ್ಸಕರು
ಆಸ್ಟರ್ ಆಸ್ಪತ್ರೆ, ಬೆಂಗಳೂರು

ಯದು ಕಿವಿ-ಮೂಗು-ಗಂಟಲು / ಮೆದುಳು ಮತ್ತು ಬೆನ್ನುಮೂಳೆಯ ಸೆಂಟರ್
# 462, 7ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ.
ಜುಲೈ 9ರ ಶನಿವಾರ 2022 , (ಪ್ರತಿ ತಿಂಗಳ 2ನೇ ಶನಿವಾರ)
ಬೆಳಿಗ್ಗೆ 10:00 ರಿಂದ ಸಂಜೆ 3:00ರ ವರೆಗೆ

ಈ ಕೆಳಗಿನ ವೈದ್ಯಕೀಯ ಸ್ಥಿತಿಯಲ್ಲಿರುವವರು ಭೇಟಿ ನೀಡಬಹುದು:

▪ ಮೆದುಳಿನ ಅಸ್ವಸ್ಥತೆಗಳು ▪ ತಲೆ ನೋವು ▪ ಆಘಾತಕಾರಿ ಮೆದುಳು ಗಾಯಗಳು ▪ ಮೆದುಳಿನ ಗಡ್ಡೆ ▪ ಪಾರ್ಶ್ವವಾಯು ▪ ಅಪಸ್ಮಾರ ▪ ಬೆನ್ನುಮೂಳೆಯ ತೊಂದರೆಗಳು ▪ ಬೆನ್ನು ನೋವು ▪ ಕುತ್ತಿಗೆ ನೋವು ▪ ಕಾಲು ನೋವು ▪ ಆಘಾತಕಾರಿ ಬೆನ್ನುಮೂಳೆ ಗಾಯಗಳು ▪ ಬೆನ್ನುಮೂಳೆಯ ವಿರೂಪ

ಕರೆಮಾಡಿ: 08192231033 / 9483964373 / 8296099030

CA-37, 24th Main, 1st Phase,
J.P. Nagar, Bangalore 560078.

Aster RV HOSPITAL
We'll Treat You Well



॥ ಶ್ರೀ ಸೂರ್ಯನಾರಾಯಣ ಸ್ವಾಮಿ ಪ್ರಸನ್ನ॥ ॥ ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ॥

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಸಿಟಿ ನಿಟ್ಟುವಳ್ಳಿ ವಾಸಿ
ಯರವನಾಗತಿಹಳ್ಳಿ ದಿ. ಪೂಜಾರ್ ಕರಿಯಪ್ಪನವರ
ಸೊಸೆಯಾದ ಶ್ರೀಮತಿ ಗೀತಾ ಮತ್ತು ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 30.6.2022ನೇ ಗುರುವಾರ ಸಂಜೆ 6.15ಕ್ಕೆ
ನನ್ನ ಪೂಜ್ಯ ಪತಿಯವರಾದ

**ಶ್ರೀ ಪೂಜಾರ್ ಸೋಮಶೇಖರಪ್ಪ**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ


**ಕೈಲಾಸ ಸಮಾರಾಧನೆಯನ್ನು**

ದಿನಾಂಕ 8.7.2022ನೇ ಶುಕ್ರವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ಸಿಟಿ, ನಿಟ್ಟುವಳ್ಳಿಯಲ್ಲಿ ಇರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು
ಮೃತರ ಧರ್ಮಪತ್ನಿ ಶ್ರೀಮತಿ ಪೂಜಾರ್ ಗೀತಾ (ಜ್ಯೋತಿ) ಮತ್ತು
ಮಕ್ಕಳು, ಪೂಜಾರ್ ವಂಶಸ್ಥರು ಹಾಗೂ ಬಂಧು-ಮಿತ್ರರು. ಮೊ. 88618 84262

ವಿ.ಸೂ: ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ







## ನಗರದಲ್ಲಿ ಇಂದು ಬೀಳ್ಕೊಡುಗೆ

ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಪ್ರಸಕ್ತ ಶೈಕ್ಷಣಿಕ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಕಾರ್ಯಕ್ರಮವವು ಕಾಲೇಜಿನ ಜೆಪಿಎಸ್ ಸಭಾಂಗಣದಲ್ಲಿ ಇಂದು ನಡೆಯಲಿದೆ. ಮುಖ್ಯ ಅತಿಥಿಯಾಗಿ ಸತೀಶ್ ಎಂ. ಆಗಮಿಸಲಿದ್ದಾರೆ.




## ಮೊದಲನೆ ವರ್ಷದ ಪುಣ್ಯಸ್ಮರಣೆ

**ದಿ॥ ಶ್ರೀಮತಿ ಸೀತಮ್ಮನವರು**

ಜನನ : 30.03.1965, ಮರಣ : 08.07.2021

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು,
ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ತೋರಿದ ಹಾದಿಯಲ್ಲಿ ಮುನ್ನಡೆಯುತ್ತಿರುವ...

ಪತಿ : ಶ್ರೀಧರ್‌ಮೂರ್ತಿ, ಮಕ್ಕಳಾದ : ರಂಗಯ್ಯ ಡಿ.ಎಸ್.
ಸೊಸೆ : ರಾಧಿಕಾ, ಮಗಳಾದ : ರಾಧ ಎಸ್.
ಮಗ : ಅಂಜನಿ ಡಿ.ಎಸ್., ರಂಜಿತ ಹೆಚ್.ಎಸ್., ಅಳಿಯ : ಮಂಜುನಾಥ್,
ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗ ಹಾಗೂ ಬುರುಡೆಕಟ್ಟೆ ವಂಶಸ್ಥರು.










JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte